ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾವು ಕೆ.ಎಸ್.ಆರ್.ಟಿ.ಸಿದಲ್ಲ ಹೇಳುತ್ತಿರುವುದು ಖಾಸಗಿಯವರು ಕ್ಯಾಷ್ಯುಯಲ್ ಕಾಂಟ್ರಾಕ್ಟ್ ಪರ್ಮಿಟ್ ತೆಗೆದುಕೊಳ್ಳುತ್ತಿದ್ದಾರೆ. ಟ್ಯೂರಿಸ್ಟ್ ಪರ್ಮಿಟನ್ನು ತೆಗೆದುಕೊಳ್ಳುತ್ತಿದ್ದಾರೆ. ಹೊರ ರಾಜ್ಯದವರು ನಮ್ಮಲ್ಲಿ ಟ್ಯೂರಿಸ್ಟ್ ಪರ್ಮಿಟನ್ನು ಬ್ಯಾನ್ ಮಾಡಿದ್ದೇವೆ. ಆದರೆ ಹೊರಗಿನ ಟ್ಯೂರಿಸ್ಟ್ ಬಸ್ ಪರ್ಮಿಟ್ ತೆಗೆದುಕೊಂಡು ಇಲ್ಲಿ ಓಡಾಡುತ್ತಿವೆ. ಇಲ್ಲಿ ನೇರವಾಗಿ ಸಂದಾಯವಾಗಬೇಕಾಗಿರುವ ಟ್ಯಾಕ್ಸ್ ಹೊರ ರಾಜ್ಯಗಳಿಗೆ ಸಂದಾಯವಾಗುತ್ತಿದೆ. ನಮ್ಮ ಆದಾಯ ಅವರಿಗೆ ಹೋಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ಎಂಬುದನ್ನು ದಯವಿಟ್ಟು ಹೇಳಿ?

ಶ್ರೀ ಭೀಮಣ್ಣ ಖಂಡ್ರೆ :- ಅದರ ಬಗ್ಗೆ ನಾವು ಚೆಕ್ ಅಪ್ ಮಾಡುತ್ತೇವೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಅದನ್ನು ಯಾವ ರೀತಿ ಬಂದ್ ಮಾಡಬೇಕೋ ಅವಕಾಶ ಸಿಕ್ಕಿದರೆ ಆ ರೀತಿ ಮಾಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ, ನಾವು ಏನು ತಿದ್ದುಪಡಿ ತಂದಿರುತ್ತೇವೆ ಅದಕ್ಕೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ 1993 ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ

ಉಪಾಧ್ಯಕ್ಷರು :- "ಖಂಡ 2 ರಿಂದ 5 ರವರೆಗೆ, ಎರಡೂ ಸೇರಿದಂತೆ, ಈ ಭತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಕಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ " ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):- 1993ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ 1993 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ 1993 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :- ಮಾನ್ಯ ಉಪಾಧ್ಯಕ್ಷರೇ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರಾದ ಶ್ರೀ ಶ್ರೀರಂಗದೇವರಾಯಲು ಅವರ ಪರವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ವಿಧೇಯಕ 1993ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಮಾನ್ಯ ಸದಸ್ಯರಿಗೆ ಕೂಡ ಇದರ ಬಗ್ಗೆ ಮಾಹಿತಿ ಇದೆ. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಎಂದು ಈಗಾಗಲೇ ಕಾನ್‌ಸ್ಟಿಟ್ಯೂಟ್ ಆಗಿದೆ. ಮತ್ತು ಒಂದು ಕಾನೂನು ಕೂಡ ಅಸ್ತಿತ್ವದಲ್ಲಿದೆ. ಈ ಒಂದು ಮಸೂದೆಯಲ್ಲಿ 7-8 ಸಣ್ಣ ತಿದ್ದುಪಡಿಗಳು ಇವೆ. ಎಲ್ಲಿ ಡೆವಲಪ್‌ಮೆಂಟ್ ಕಮಿಷನರ್ ಎಂದು ಹಿಂದೆ ಶಬ್ದ ಇತ್ತು ಅದನ್ನು ತೆಗೆದು ಈಗ ಡಿವಿಜನಲ್ ಕಮಿಷನರ್ ರ್‍ಯಾಂಕಿನ ಒಬ್ಬರು ಸೆಕ್ರೆಟರಿಗಳಾಗಿ ಕಾರ್ಯ ನಿರ್ವಹಿಸಬೇಕೆಂಬ ಬದಲಾವಣೆ ತಂದಿದ್ದೇವೆ. ಅಲ್ಲಿ ಡೆವಲಪ್‌ಮೆಂಟ್ ಕಮಿಷನರ್ ರ್‍ಯಾಂಕಿನ ಒಬ್ಬರು ಸೆಕ್ರೆಟರಿಗಳಾಗಿದ್ದರೆ, ಮಲೆನಾಡು ಮತ್ತು ಹೈದರಾಬಾದ್ ಕರ್ನಾಟಕ ಎರಡಕ್ಕೂ ಕೂಡ ಸಮಾನಾಂತರವಾಗಿ ಒಂದೇ ರ್‍ಯಾಂಕಿನ ಸೆಕ್ರೆಟರಿಗಳಾಗಿರಬೇಕೆಂಬ ದೃಷ್ಟಿಯಿಂದ ಮತ್ತು ಕೆಲಸ ನಿರ್ವಹಿಸುವಾಗಲೂ ಡಿವಿಜನಲ್ ಕಮಿಷನರ್ ಗುಲ್ಬರ್ಗಾದಲ್ಲಿ ಇದ್ದ ಕಾರಣ ಇದು ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಒಂದು ಸಣ್ಣ ತಿದ್ದುಪಡಿ ಇದೆ. ಇದರಲ್ಲಿ ವಿಶೇಷ ಮಹತ್ವ ಏನೂ ಇಲ್ಲ. ಎರಡನೆಯದು, ಮೀಟಿಂಗ್ ನಡೆಸಬೇಕಾದರೆ ಕೇವಲ ಗುಲಬರ್ಗಾದಲ್ಲಿ ನಡೆಸಬೇಕೆಂಬುದು, ಅಂದರೆ ಹೆಡ್‌ಕ್ವಾರ್ಟರ್ ಎಲ್ಲಿದೆ ಅಲ್ಲಿ ನಡೆಸಬೇಕೆಂದು ಇತ್ತು. ಈಗ ಸಂದರ್ಭ ಬಂದಾಗ ಬೆಂಗಳೂರಿನಲ್ಲಾಗಲಿ ಅಥವಾ ಕೇಂದ್ರ ಸರ್ಕಾರದಲ್ಲಿ ಕೆಲಸ ಇದ್ದಾಗ ಅಲ್ಲಿಯೂ ಕೂಡ ಮೀಟಿಂಗ್ ಮಾಡಬೇಕು, ಅದಕ್ಕೆ ಮಂಡಲಿ ಪರವಾನಗಿ ತೆಗೆದುಕೊಳ್ಳಬೇಕೆಂಬ ತಿದ್ದುಪಡಿ ಇದೆ. ಮೂರನೆಯದು, ಯೋಜನೆಯನ್ನು ರೂಪಿಸಲು ಮತ್ತು ಅನುಸಂಗಿಕ ವಿಷಯಗಳಿಗಾಗಿ ಸರ್ಕಾರೇತರ ಸಂಸ್ಥೆಗಳಿಂದ ಅಂದರೆ ಅನೇಕ ಸಾರಿ ಕೇಂದ್ರ ಸರ್ಕಾರದಿಂದ ಕೆಲವು ಗ್ರಾಂಟುಗಳು ಬರುತ್ತವೆ. ಆ ಗ್ರಾಂಟ್ ಬಂದಾಗ ಅದರಲ್ಲಿ ನಾನ್ ಅಫಿಷಿಯಲ್ ಬಾಡೀಸ್ ಇನ್‌ವಾಲ್ವ್ ಮಾಡಬೇಕಾಗುತ್ತದೆ. ಉದಾಹರಣೆಗಾಗಿ ಕೇಂದ್ರ ಸರ್ಕಾರದಲ್ಲಿರುವ ಒಂದು ಕಪಾರ್ಡ್ ಎಂಬ ಸಂಸ್ಥೆ ಇದೆ. ಆ ಸಂಸ್ಥೆಯಿಂದ ನಾವು ಲಾಭ ಪಡೆದುಕೊಳ್ಳಬೇಕಾದರೆ ಅಥವಾ ಯಾವುದಾದರೂ ಒಂದು ಅಭಿವೃದ್ಧಿ ಕೆಲಸ ತೆಗೆದು ಕೊಳ್ಳಬೇಕಾದರೆ ನಮ್ಮಲ್ಲಿ ಕೂಡ ಅಂಥ ನಾನ್ ಅಫಿಷಿಯಲ್ ಬಾಡಿ ಇದ್ದರೆ ಅವರು ಗ್ರಾಂಟ್ ಕೊಡುತ್ತಾರೆ. ಇಲ್ಲದಿದ್ದರೆ ನೇರವಾಗಿ ಸರ್ಕಾರಕ್ಕಾಗಲಿ ಅಥವಾ ಕಾರ್ಪೊರೇಷನ್ನಿಗಾಗಲಿ ಕೊಡುವುದಿಲ್ಲ. ಅದಕ್ಕಾಗಿ ಅದು ಒಂದು ಇರಲಿ ಎಂಬ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ಇದರಲ್ಲಿ ಸೂಚಿಸಲಾಗಿದೆ. ಇದರಿಂದ ಆ ಭಾಗಕ್ಕೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ನಾಲ್ಕನೆಯದಾಗಿ, ಸಾರ್ವಜನಿಕರ ಹಿತಾಸಕ್ತಿಯಿಂದ ಅನೇಕ ಸಲ ಅಭಿವೃದ್ಧಿ ಕಾರ್ಯದಲ್ಲಿ ಸರ್ಕಾರದವರೇ ನೇರವಾಗಿ ಕೆಲವು ಡೈರೆಕ್ಷನ್ ಕೊಡಬೇಕಾಗುತ್ತದೆ ಮತ್ತು ಸರ್ಕಾರದ ಉದ್ದೇಶ ಏನಿರುತ್ತದೆ ಅಥವಾ ಯಾವುದಾದರೂ ಒಂದು ಕಾರ್ಯಕ್ರಮವನ್ನು ಬೋರ್ಡಿನವರು ಮಾಡದೆ ಇದ್ದ ಪಕ್ಷದಲ್ಲಿ ನೇರವಾಗಿ ಡೈರೆಕ್ಷನ್ ಕೊಡತಕ್ಕ ಅವಕಾಶ ಇರಬೇಕೆಂದು ಆ ತಿದ್ದುಪಡಿಯನ್ನು ಇದರಲ್ಲಿ ಅಳವಡಿಸಿಕೊಂಡಿದ್ದೇವೆ. ಅದಕ್ಕಾಗಿ ಈ 4 ಸಣ್ಣ ತಿದ್ದುಪಡಿಗಳು ಇದ್ದರೂಕೂಡ ಇವು ಮಹತ್ವವಾದ ತಿದ್ದುಪಡಿಗಳಾಗಿವೆ. ಇದರಿಂದ ಕೆಲಸ ಬಹಳ ಚುರುಕಾಗಿ ಆಗುತ್ತದೆ ಮತ್ತು ಸರ್ಕಾರದವರು ಅನೇಕ ಸಲ ಹೊಸ ಹೊಸ ಪಾಲಿಸಿಗಳನ್ನು ಮಾಡಿದಾಗ ಹೊಸ ನಾರ್ಮ್ಸ್ ಮಾಡಿದಾಗ ಅವರು ಅನುಷ್ಠಾನಕ್ಕೆ ತರದೆ ಇದ್ದ ಪಕ್ಷದಲ್ಲಿ ಸರ್ಕಾರಕ್ಕೆ

ಡೈರೆಕ್ಷನ್ ಕೊಡುವುದಕ್ಕೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಈ ತಿದ್ದುಪಡಿಗಳನ್ನು ತಂದಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ಮತ್ತು ವಿರೋಧ ಪಕ್ಷದ ನಾಯಕರು ಒಪ್ಪಿಗೆ ಕೊಡುತ್ತಾರೆಂದು ಭಾವಿಸಿ ಅವರ ಒಪ್ಪಿಗೆಯನ್ನು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೇ ಈ ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕೆಂದು ಡಿಮ್ಯಾಂಡ್ ಮಾಡಿದ್ದು ನಾವೇ. ಏಕೆಂದರೆ ಆ ಭಾಗ ಅತಿ ಹಿಂದುಳಿದ ಪ್ರದೇಶ. ಅದರಲ್ಲೂ ಅತಿ ಕಡುಬಡವರು ಅಲ್ಪ ಸಂಖ್ಯಾತರು, ಹಿಂದುಳಿದ ಜನಾಂಗ ಆ ಭಾಗದಲ್ಲಿ ಹೆಚ್ಚು, ಆ ಭಾಗದ ಅಭಿವೃದ್ಧಿ ಆಗಬೇಕು. ರಾಜ್ಯದ ಬೇರೆ ಭಾಗದ ಜೊತೆ ಆದೂ ಸಹ ಸಮತೋಲನವಾಗಿ ಅಭಿವೃದ್ಧಿಯಾಗಬೇಕು. ಅಲ್ಲಿ ಆ ಭಾಗದ ಜನರ ಆರ್ಥಿಕ ಏಳಿಗೆಯಾಗಬೇಕು. ಈ ಉದ್ದೇಶಕ್ಕೆ ಈ ಒಂದುಬೋರ್ಡ್ ಫಾರಂ ಆಯಿತು. ಇವತ್ತು ಏನು ಮಾನ್ಯ ಸಚಿವರು ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಅದರಲ್ಲಿ ಮೂರನೆಯದು. "Recognition of non-government organisations" ಇದು ಬಿಟ್ಟರೆ ಬೇರೆ ಯಾವ ಒಂದು ತಿದ್ದುಪಡಿಯು ಅವಶ್ಯಕತೆ ಇರಲಿಲ್ಲವೆಂದು ನಾನು ಭಾವಿಸುತ್ತೇನೆ. ಇದು ಕೇವಲ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ಅನುಕೂಲ ಮಾಡಲಿಕ್ಕೆ ಈ ತಿದ್ದುಪಡಿ ತಂದಿದ್ದಾರೆ. ಒಂದು ಕಡೆ ಸರ್ಕಾರ ಹೇಳುತ್ತದೆ, ನಾವು ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ ಎಂದು. ನಾವು ಅಧಿಕಾರವನ್ನು ಜನರ ಕೈಗೆ ಕೊಡುತ್ತೇವೆ, Administration we will take to the doors, ಹಳ್ಳಿಗಳಿಗೆ ನಾವು ನಮ್ಮ ಆಡಳಿತವನ್ನು ತೆಗೆದುಕೊಂಡು ಹೋಗುತ್ತೇವೆಂದು ಹೇಳಿ ಇವತ್ತು ಏನು ಮಾಡಿದ್ದಾರೆ? Appointment of a Divisional Commis ioner instead of a Development Commissioner ಇಲ್ಲಿಯವರೆಗೆ Deve')pment Commissioner was to be the Secretary of the Board, ಹೆಡ್ ಆಫೀಸ್ ಗುಲ್ಬರ್ಗಾದಲ್ಲಿ ಇತ್ತು. ಈ ಬೋರ್ಡ್ ಫಾರ್ಮ್ ಆದ ನಂತರ ಡೆವಲೆಪ್‌ಮೆಂಟ್ ಕಮಿಷನರ್ ಅಲ್ಲಿಗೆ ಹೋಗಿಲ್ಲ. ಅವರಿಗೆ ಅಲ್ಲಿಗೆ ಹೋಗುವುದಕ್ಕೆ ಮನಸ್ಸು ಇಲ್ಲ; ಯಾವ ಅಧಿಕಾರಿಗೂ ಹೋಗುವುದಕ್ಕೆ ಮನಸ್ಸು ಇಲ್ಲ. ಪೋಸ್ಟ್‌ಮಾಡುವ ವ್ಯಕ್ತಿಗಳೂ ಹೋಗಿಲ್ಲ. ಹೀಗಾಗಿ ಈ ಬ್ಯೂರೋಕ್ರಸಿ ಒತ್ತಡಕ್ಕೆ ಮಣಿದು ತಾವು ಅಲ್ಲಿ ಇರುವ ಡಿವಿಜನಲ್ ಕಮಿಷನರ್ ಇದರ ಸೆಕ್ರೆಟರಿ ಆಗಬೇಕೆಂದು ತಿದ್ದುಪಡಿ ತಂದಿದ್ದೀರಿ. ಇದರಲ್ಲಿ ಡೆವಲಪ್‌ಮೆಂಟ್ ಕಮಿಷನರ್‌ಗೂ ಅನುಕೂಲ ಮಾಡಿಕೊಟ್ಟಿರಿ. ಯಾರೂ ಗುಲ್ಬರ್ಗಾ ನೋಡುವುದು ಬೇಡ. ಬೆಂಗಳೂರಿನಲ್ಲಿ ಆರಾಮವಾಗಿ ಇರಲಿ. ಮತ್ತೆ ಡಿವಿಜನಲ್ ಕಮಿಷನರ್‌ಗೂ ಇಲ್ಲಿ ಬೆಂಗಳೂರಿಗೆ ಬರುವುದಕ್ಕೆ ಅನುಕೂಲಮಾಡಿಕೊಟ್ಟಿರಿ. ಸಭೆ ಇಲ್ಲಿ ಬೆಂಗಳೂರಿನಲ್ಲಿ ನಡೆಯಬೇಕೆಂದು ಮಾಡಿದ್ದೀರಿ. ಏಕೆ ಮಾಡಿದಿರಿ? ಅಧಿಕಾರ ವಿಕೇಂದ್ರೀಕರಣ ಎಂದು ಹೇಳುತ್ತೀರಿ. ಜನರ ಸಮೀಪ ಹೋಗಬೇಕು ಎಂದು ಹೇಳುತ್ತೀರಿ. ಹಾಗಿದ್ದರೆ ಬೆಂಗಳೂರಿನಲ್ಲಿ ನಡೆಯುವ ಅವಶ್ಯಕತೆ ಏನು? ಇದು ಗುಲ್ಬರ್ಗಾದಲ್ಲೇ ನಡೆಯಲಿ. ಜನಸಾಮಾನ್ಯರು ಬರುತ್ತಾರೆ. ನಿಮಗೆ ಜನಸಂಪರ್ಕ ಬೆಳೆಯುತ್ತದೆ. ಕಷ್ಟನಷ್ಟ ಕೇಳುವುದಕ್ಕೆ ಸಾಧ್ಯವಾಗುತ್ತದೆ. ಬೆಂಗಳೂರಿಗೆ ಶಾಸಕರು ಬರಬಹುದು. ತಾವು ಮಂತ್ರಿಗಳಾಗಿ ಮೀಟಿಂಗ್ ಮಾಡಬಹುದು. ಆದರೆ the pulse of the people - you will be able to know from the legislators, I do agree. ಆದರೆ ನಿಜವಾಗಿ ಜನರ ಜೊತೆ ಸಂಪರ್ಕ ಮಾಡಿ, ಜನರ ಅಭಿಪ್ರಾಯ ಏನು ಎಂದು ತಿಳಿದುಕೊಳ್ಳಬೇಕಾದರೆ ಆ ಸಭೆಗಳು ಅಲ್ಲಿ ನಡೆಯಬೇಕಾಗುತ್ತದೆ. ಮಂತ್ರಿಗಳಿಗೆ ಅನುಕೂಲ ಮಾಡಿಕೊಂಡಿದ್ದೀರಿ. ಇವತ್ತು ಆ ಭಾಗದ ರಸ್ತೆಗಳು ಬಹಳ ಹಾಳಾಗಿವೆ. ಹೀಗಾಗಿ ಇಲ್ಲಿ ಸಭೆ ಮಾಡುವುದು, ಡೆವಲಪ್‌ಮೆಂಟ್ ಕಮಿಷನರ್ ಅಲ್ಲಿಗೆ ಹೋಗುವ ಹಾಗೆ ಇಲ್ಲ. ಜೊತೆಗೆ ಡಿವಿಜನಲ್ ಕಮಿಷನರ್ ಇಲ್ಲಿಗೆ ಬರುವುದಕ್ಕೆ ಅನುಕೂಲ ಮಾಡಿಕೊಡುವುದು. ಆದ್ದರಿಂದ ಇದರಲ್ಲಿ ಈ ತಿದ್ದುಪಡಿಯ ಅವಶ್ಯಕತೆ ಇಲ್ಲ. ಆದ್ದರಿಂದ ಈ ತಿದ್ದುಪಡಿ ಏನಿದೆ ಅದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ನಾನು ವಿನಯದಿಂದ ಸಲಹೆ ಮಾಡುತ್ತೇವೆ. ಇವತ್ತು ಹೀಗೆ ಮಾಡುವುದಿದ್ದರೆ ಇಲ್ಲಿ ಆ ಬೋರ್ಡ್‌ನ ಹೆಸರನ್ನೇ ''ಬೆಂಗಳೂರು ಹೈದರಾಬಾದ್ ಡೆವಲಪ್‌ಮೆಂಟ್ ಅಥಾರಿಟಿ'' ಎಂದು ಬದಲಾವಣೆ

ಮಾಡಿ. ಏಕೆಂದರೆ ಮಾನಿಟರಿಂಗ್ ಇಲ್ಲೇ ಆಗಬೇಕು. ಸಭೆಗಳು ಇಲ್ಲೇ ನಡೆಯಬೇಕೆಂದು ಇದ್ದರೆ you change this name as the "Bangalore - Hyderabad Development Authority." ಬೆಂಗಳೂರಿನ ಹಪಾಗುಣ ಮಂತ್ರಿಗಳಿಗೆ ಚೆನ್ನಾಗಿ ಇದೆ. ಇವತ್ತು ಇಲಾಖೆಯ ಮಂತ್ರಿಗಳು ಶ್ರೀರಂಗದೇವರಾಯಲು ಅವರು ಏನಿದ್ದಾರೆ ಅವರಿಗೆ ಆರೋಗ್ಯ ಚೆನ್ನಾಗಿದೆ. ಇದೆಲ್ಲಾ ಅನುಕೂಲ ಮಾಡುವುದಕ್ಕೆ ಮಾಡಿದ್ದೀರಿ. ಇವತ್ತು ಪ್ರಶ್ನೆ ಏನೆಂದರೆ, ಮುಖ್ಯವಾಗಿ ಈ ಬೋರ್ಡ್ ಮಾಡಿದ ಉದ್ದೇಶ ಏನು? ನಮ್ಮ ಕಾಲದಲ್ಲಿ ಮತ್ತು ವೀರೇಂದ್ರಪಾಟೀಲರ ಕಾಲದಲ್ಲಿ ಸಾಕಷ್ಟು ವಿಚಾರಗಳು ಬಂದವು. ಸಾಕಷ್ಟು ಚರ್ಚೆ ಆಯಿತು. ನಮ್ಮ ಆ ಭಾಗ ಹಿಂದುಳಿದಿದೆ, ಅಭಿವೃದ್ಧಿಯಾಗಿಲ್ಲ, ಅಭಿವೃದ್ಧಿ ಕುರಿತವಾಗಿದೆ, ಹೆಚ್ಚಿನ ಡೆವಲಪ್‌ಮೆಂಟ್ ಆಗಬೇಕೆಂದು, ಗ್ರಾಂಟ್ಸ್ ಬರಬೇಕೆಂದು ಹೇಳಿ ಮಾಡಿದ್ದುದು. ಆ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಆದರೆ ಇವತ್ತು ಏನಾಗಿದೆ? ಇವತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಗೆ 68 ಕೋಟಿ ರೂಪಾಯಿಗಳನ್ನು ಮುಂಗಡ ಪತ್ರದಲ್ಲಿ ಇಟ್ಟಿದ್ದೀರಿ. ಈ ಹಣದಲ್ಲಿ ಎಷ್ಟು ರಿಲೀಸ್ ಮಾಡಿದ್ದೀರಿ? ಯಾವ ಉದ್ದೇಶಕ್ಕೆ ಈ ಬೋರ್ಡ್ ಮಾಡಿದಿರೋ ಆ ಭಾಗದ ಅಭಿವೃದ್ಧಿಗೆ ಎಷ್ಟು ಹಣ ರಿಲೀಸ್ ಮಾಡಿದ್ದೀರಿ? ಇಡೀ ಹಣವನ್ನು ರಿಲೀಸ್ ಮಾಡಿ ಸರಿಯಾಗಿ ಉಪಯೋಗ ಆಗಿದ್ದರೆ ನಾನು ಮೆಚ್ಚುತ್ತಿದ್ದೆ. ಆದರೆ ಅದು ಮಾಡಿಲ್ಲ. ಅಷ್ಟೇ ಅಲ್ಲ. ಈ 68 ಕೋಟಿ ರೂಪಾಯಿಯನ್ನು ನೇರವಾಗಿ ಕೊಟ್ಟಿಲ್ಲ. ಬೇರೆ ಬೇರೆ ಇಲಾಖೆಯಲ್ಲಿ, ಅದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ, ಜಿಲ್ಲಾ ಪರಿಷತ್ತಿಗೆ ಹಣ ಸಂಗ್ರಹಣೆ ಮಾಡಿದ್ದು 68 ಕೋಟಿ ಎಂದು ಹೇಳುತ್ತೀರಿ. ಇವತ್ತು ಜಿಲ್ಲಾಪರಿಷತ್ತಿಗೆ ಅಥವಾ ಕೃಷಿ ಇಲಾಖೆಗೆ ಏನು ಹಣ ಹೋಗಬೇಕೋ ಅದನ್ನು ಬಿಟ್ಟು ಈ 68 ಕೋಟಿ ರೂಪಾಯಿ ಅಲ್ಲ. ನೀವು ಇವತ್ತು ಗ್ಯಾಲರಿ ಪ್ಲೀಸ್ ಮಾಡುತ್ತಿದ್ದೀರೇ ವಿನಹ ಅಭಿವೃದ್ಧಿ ಮಾಡುವ ಮನಸ್ಸು ನಿಮಗೆ ಇಲ್ಲ. ಆ ಭಾಗದ ಅಭಿವೃದ್ಧಿಯ ಬಗ್ಗೆ ನಿಮಗೆ ಚಿಂತನೆಯಿಲ್ಲ. ಜನರು ಬೋರ್ಡ್ ಆಗಿದೆ ಏನೋ ಅಭಿವೃದ್ಧಿಯಾಗುತ್ತದೆಂದು ಬಹಳ ಆಸೆ ಪಟ್ಟಿದ್ದರು. ನಾನು ವಿರೋಧಪಕ್ಷದ ನಾಯಕನಾದ ಮೇಲೆ ಮೂರು ಬಾರಿ ಹೋಗಿದ್ದೇನೆ. ಅಲ್ಲಿ ಕಾರಿನಿಂದ ಪ್ರವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ತಿಳಿದುಕೊಂಡಿದ್ದೆ ನಮ್ಮ ಕಡೆ ಮಲೆನಾಡು ಜಿಲ್ಲೆಗಳಲ್ಲಿ ಮಳೆ ಜಾಸ್ತಿ ಬಂದು ರಸ್ತೆಗಳ ಪರಿಸ್ಥಿತಿ ಬಹಳ ಕೆಟ್ಟದಾಗಿದೆಯೆಂದು. ನಿಮ್ಮ ಕಡೆಯ ರಸ್ತೆಗಳನ್ನು ನೋಡಿದಾಗ ನಿಮಗಿಂತ ನಮ್ಮ ರಸ್ತೆಗಳು ಎಷ್ಟೋ ಪಾಲು ಒಳ್ಳೆಯ ರಸ್ತೆಗಳಿವೆ. ನಮ್ಮ ಕಡೆ ಹೆವಿ ರೇನ್ ಇದ್ದರೂ ರಸ್ತೆಗಳು ಪರವಾಗಿಲ್ಲ. ನಿಮ್ಮ ಕಡೆಯ ರಸ್ತೆಗಳ ಪರಿಸ್ಥಿತಿ ಕಟ್ಟಡಗಳ ಪರಿಸ್ಥಿತಿ, ಸ್ಯಾನಿಟೇಷನ್ ಪರಿಸ್ಥಿತಿ ನೋಡಿದರೆ ನಾವು ಇನ್ನೂ ಎಲ್ಲಿದ್ದೇವೆಂದು ಗೊತ್ತಾಗುವುದಿಲ್ಲ. We feel sometimes that we are 200 years back in development. ಹಾಗಾಗಿ ತಮ್ಮಂತಹ ಪ್ರಭಾವಿ ಜನ, ಮಾನ್ಯ ಖಿರ್ಗೆಯವರೇ, ನಿಮ್ಮ ಪರವಾಗಿ ನಾವು ವಾದ ಮಾಡುತ್ತಿದ್ದೇವೆ. ನಿಮ್ಮ ಭಾಗದಲ್ಲಿ ಹಿಂದುಳಿದ ಜನ ಹೆಚ್ಚು ಇದ್ದಾರೆ. ಅಭಿವೃದ್ಧಿ ದೃಷ್ಟಿಯಿಂದ ಹಿಂದೆ ಇದ್ದಾರೆ. ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕು. ಹೆಚ್ಚಿನ ಅಭಿವೃದ್ಧಿಯಾಗಬೇಕು ಆ ದೃಷ್ಟಿಯಲ್ಲಿ ನಿಮ್ಮ ಚಿಂತನೆ ಇರಬೇಕಾಗುತ್ತದೆ. ನಿಮ್ಮ ಜಿಲ್ಲೆಗೆ ಸಾಕಷ್ಟು ಮಂತ್ರಿಗಳನ್ನು ವೀರಪ್ಪ ಮೊಯ್ಲಿಯವರು ಮಾಡಿದ್ದಾರೆ. ಗುಲ್ಬರ್ಗದಿಂದ ಮಾನ್ಯ ಖಿರ್ಗೆಯವರು, ಧರ್ಮಸಿಂಗ್‌ರವರು, ರಾಮಕೃಷ್ಣರವರು, ಮದನಗೋಪಾಲನಾಯಕ್‌ರವರು, ಆಮೇಲೆ ಮೇಲ್ಮನೆಗೆ ಛೇರ್ಮನ್ ಆಗಿ ಕಲ್ಯಾಣಕರ್ ಅವರನ್ನು ಮಾಡಿದ್ದೀರಿ. ನಮ್ಮ ಕಡೆಯಿಂದ ನಾವೂ ಸಹ ಮಾಡಿದ್ದೇವೆ. ಬಿ.ಆರ್. ಪಾಟೀಲ್‌ರವರನ್ನು ಡೆಪ್ಯುಟಿ ಛೇರ್ಮನ್ ಮಾಡಿದ್ದೇವೆ. ಮಾನ್ಯ ವಿಂಡ್ರೆಯವರು ಬೀದರ್‌ನಿಂದ, ರಾಯಚೂರಿನಿಂದ ಶ್ರೀರಂಗದೇವರಾಯಲು ಹೀಗೆ ಎಲ್ಲರೂ ಇದ್ದಾರೆ. ಬಳ್ಳಾರಿಯಿಂದ ಮಾನ್ಯ ಘೋರ್ಪಡೆ ಸಾಹೇಬರು; ನಾಲ್ಕು ಜಿಲ್ಲೆಗಳಿಗೆ ರೆಪ್ರಸೆಂಟೇಷನ್ ಕೊಟ್ಟಿದ್ದೀರಿ. ಆ ಕೆಲಸ ಮಾಡಿದ್ದಾರೆ. ಆದರೆ ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ. ನೀವು ಏಕೆ ಕ್ಯಾಬಿನೆಟ್‌ನಲ್ಲಿದ್ದೀರಿ? ಅದು ನನಗೆ ಗೊತ್ತಾಗಲಿಲ್ಲ. ನೀವು ಪ್ರಭಾವ ಏನೂ ಬೀರುತ್ತಿಲ್ಲ ಫೈನಾನ್ಸ್ ಮಿನಿಸ್ಟರ್ ಮೇಲೆ. ನೀವು ಫೈನಾನ್ಸ್ ಮಿನಿಸ್ಟರ್ ಮೇಲೆ ಪ್ರಭಾವ ಬೀರಿ ಆ ಭಾಗದ ಅಭಿವೃದ್ಧಿಗೋಸ್ಕರ ಹಣವನ್ನು ನೀವು ತೆಗೆದುಕೊಳ್ಳಲು ಆಗುತ್ತಿಲ್ಲ. ಇದೇ ಪ್ರಕಾರ ಆ್ಯಟಿಟ್ಯೂಡ್ ಇದ್ದರೆ ಇದೇ ಪ್ರಕಾರ ಪರಿಸ್ಥಿತಿ ಇರುತ್ತದೆ. ಯಾವ ಅಭಿವೃದ್ಧಿಯಾಗುವುದಕ್ಕೂ ಸಾಧ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- ನೀವು ಮಂತ್ರಿಗಳು ಆಗಿದ್ದವರು; ನೀವು ಮಂತ್ರಿಗಳು ಆದಂತಹ ಸಂದರ್ಭದಲ್ಲಿ ಎಷ್ಟೊಂದು ಕೆಲಸಗಳನ್ನು ಮಾಡಿದ್ದೀರಿ?

ಶ್ರೀ ಆರ್. ವಿ. ದೇಶಪಾಂಡೆ :- ನೋಡಿ

ಶ್ರೀ ಕಾಗೋಡು ತಿಮ್ಮಪ್ಪ :- ಮಂತ್ರಿಗಳು ಆದಮೇಲೆ ಪ್ರಭಾವ ಬೀರುತ್ತಾರೆ. ಸ್ವಾಮಿ ಇಷ್ಟೊಂದು ಲಘುವಾಗಿ ಏಕೆ ಕಾಣುತ್ತೀರಿ? ಅವರು ಸೀನಿಯರ್ಸ್ ಮೆಂಬರ್ಸ್ ಇದ್ದಾರೆ. ಅವರಿಗೆ ಅವರ ಕಡೆಯ ಪ್ರದೇಶ ಅಭಿವೃದ್ಧಿ ಮಾಡುವ ಕಡೆಗೆ ಗಮನ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಎಲ್ಲವನ್ನೂ ಮಾಡಿದ್ದಾರೆಂದು ಹೇಳಿ ಅವರ ಪರವಾಗಿ ನಾವು ಮಾತನಾಡಬೇಕಾಗಿಲ್ಲ; ನಾವು ಕುಳಿತುಕೊಳ್ಳುತ್ತೇವೆ. ರಸ್ತೆಯಾಗಿದೆ, ಲೈಟ್ ಆಗಿದೆ ಎಲ್ಲಾ ಆಗಿದೆಯೆಂದು ಹೇಳಿದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ವಾಟಾಳ್ ನಾಗರಾಜ್‌ರವರೇ, ಒಂದು ಮಾತು ಹೇಳುತ್ತೇನೆ. ನಿಜವಾಗಿ ಮಾನ್ಯ ದೇಶಪಾಂಡೆಯವರಿಗೆ ಆ ಭಾಗದ ಬಗ್ಗೆ ಕಳಕಳಿ ಇದ್ದರೆ ಆ ಭಾಗದ ಜನರಿಗೆ ಇದರ ಮೇಲೆ ಡಿಸ್‌ಕಷನ್ ಮಾಡಲು ಅವಕಾಶ ಮಾಡಿಕೊಡುತ್ತಿದ್ದರು.

ಶ್ರೀ ಆರ್.ವಿ. ದೇಶಪಾಂಡೆ :- ಅವರು ಮಾತನಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ಆದ್ದರಿಂದ ನೀವು ಹೇಳುವ ರೀತಿಯಲ್ಲಿ ಏನು ಅರ್ಥ ಬರುತ್ತದೆಂದರೆ.

ಶ್ರೀ ಆರ್.ವಿ. ದೇಶಪಾಂಡೆ :- ನೀವು ಶಿವಮೊಗ್ಗ ಸಿಟಿ ಅಷ್ಟೇ ಮಾತನಾಡುತ್ತೀರಿ ಏನು? ನಾನು ಇಡೀ ರಾಜ್ಯದ ಬಗ್ಗೆ ಚಿಂತನೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :- ನಾನು ಶಿವಮೊಗ್ಗ ಬಗ್ಗೆ ಅಷ್ಟೇ ಚಿಂತನೆ ಮಾಡುವುದಕ್ಕಾಗುವುದಿಲ್ಲ. ಮಾಡಬೇಕು ಜವಾಬ್ದಾರಿ ಇರಬೇಕು, ಅವರ ವ್ಯಾಖ್ಯಾನದಿಂದ ಏನು ಅರ್ಥ ಬರುತ್ತದೆಂದರೆ, ಆ ಭಾಗದಿಂದ ಬಂದಿರತಕ್ಕವರು ಇವತ್ತು ಮುಖ್ಯಮಂತ್ರಿಗಳ ಮೇಲೆ ಪ್ರಭಾವ ಬೀರತಕ್ಕ ಶಕ್ತಿಯಿಲ್ಲ ಎನ್ನತಕ್ಕ ಭಾವನೆ ಬರುತ್ತದೆ. ಹಾಗೆ ಇಲ್ಲದಿದ್ದರೆ, ವಿಶ್ವಾಸವಿಲ್ಲದೆ ಅವರು ಮಂತ್ರಿಮಂಡಲದಲ್ಲಿ ಇದ್ದಾರೆಯೇ?

ಶ್ರೀ ಆರ್.ವಿ. ದೇಶಪಾಂಡೆ:- ವಿಶ್ವಾಸವಿಲ್ಲವೆಂದು ನಾನು ಹೇಳಲಿಲ್ಲ. ಬಂಗಾರಪ್ಪನವರು ಇದ್ದಾಗ ಇವರು ಬಹಳ ಸಮೀಪ ಇದ್ದರು, ವೀರೇಂದ್ರಪಾಟೀಲರು ಇದ್ದಾಗ ಬಹಳ ಸಮೀಪ ಇದ್ದರು. ಇವತ್ತೂ ಸಮೀಪ ಇದ್ದರೆ ತಾವು ಹೆಚ್ಚು ಪ್ರಭಾವ ಬೀರಿ ಹೆಚ್ಚು ಹಣ ಬಿಡುಗಡೆ ಮಾಡಿಕೊಳ್ಳಿಯೆಂದು ಹೇಳುತ್ತಿದ್ದೇನೆ. ನಮ್ಮ ಕಾಲದ ರೆಕಾರ್ಡ್ ತೆಗೆದು ನೋಡಿ ರಾಮಕೃಷ್ಣಹೆಗಡೆಯವರು ಮತ್ತು ಬೊಮ್ಮಾಯಿಯವರು ಇದ್ದಾಗ ಎಷ್ಟು ಹಣವನ್ನು ತೆಗೆದುಕೊಂಡು ಖರ್ಚು ಮಾಡಿದ್ದೇವೆಂದು ನೋಡಿ. ಯಾವ ಪ್ರಕಾರ ಅಭಿವೃದ್ಧಿ ಮಾಡಿಕೊಂಡಿದ್ದೇವೆ ನೋಡಿ. ಈಗ ಮಾಡಿಕೊಳ್ಳದಿದ್ದರೆ ಮತ್ತೆ ಯಾವಾಗ ಮಾಡುತ್ತೀರಿ? ಖಾಯಂ ಆಗಿ ನೀವೇ ಇರುತ್ತೀರೇನು? ಜನ ನಿಮ್ಮನ್ನು ಅಧಿಕಾರದಲ್ಲಿ ಇಡುತ್ತಾರೆಯೇ? ಯಾರೂ ಖಾಯಂ ಆಗಿ ಇರಲಿಕ್ಕೆ ಸಾಧ್ಯವಿಲ್ಲ. ನೀವು ಯಾವಾಗ ಅಧಿಕಾರದಲ್ಲಿ ಇರುತ್ತೀರಿ ಆಗ ನೀವು ಕೆಲಸ ಮಾಡಬೇಕಾಗುತ್ತದೆ. ಅದರ ಬಗ್ಗೆ ವಿವಾದ ಇಲ್ಲ.

ಶ್ರೀ ಮದನಗೋಪಾಲ ನಾಯಕ್ :- ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ನಿಮ್ಮ ಸರ್ಕಾರ ಇದ್ದಾಗ ದುಡ್ಡು ಕೊಟ್ಟೇ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ :- ನಾವು ಕೊಡಲಿಲ್ಲ, ನೀವು ಕೊಡಿ.

ಶ್ರೀ ವಾಟಾಳ್‌ನಾಗಾರಾಜ್ :- ಇವರ ಸರ್ಕಾರ ಕೊಟ್ಟಿದೆ. ಮಂಗಳಾರತಿ ಎತ್ತಿ ತೆಂಗಿನಕಾಯಿ ಒಡೆಯೋಣ ಇವರ ಸರ್ಕಾರ ಕೊಟ್ಟಿದ್ದಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ದೇಶಪಾಂಡೆಯವರೇ ಮಾತನಾಡಿ; ತಮ್ಮ ಮಾತಿನ ಪ್ರಭಾವದಿಂದ ಈಗ ಮುಖ್ಯಮಂತ್ರಿಗಳೂ ಬಂದಿದ್ದಾರೆ ಅವರು ಫೈನಾನ್ಸ್ ಮಿನಿಸ್ಟರ್ ಇದ್ದಾರೆ; ಹೆಚ್ಚಿನ ಹಣ ನಮಗೆ ಬರಲಿ, ತಾವು ಆ ರೀತಿಯಲ್ಲಿ ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ :- ಮುಖ್ಯಮಂತ್ರಿಗಳು ಗುಲ್ಬರ್ಗಾಕ್ಕೆ ಒಳ್ಳೆಯ ರೆಪ್ರಸಂಟೇಷನ್ ಕೊಟ್ಟಿದ್ದಾರೆ; ಬೀದರ್‌ಗೆ ಕೊಟ್ಟಿದ್ದಾರೆ, ಬಳ್ಳಾರಿಗೆ ಕೊಟ್ಟಿದ್ದಾರೆ. ಆದರೆ ನೀವು ಮುಖ್ಯಮಂತ್ರಿಗಳ ಮೇಲೆ, ಯಾರು ಆರ್ಥಿಕ ಮಂತ್ರಿಗಳು ಇದ್ದಾರೆ. ಅವರ ಮೇಲೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಪರವಾಗಿ ಹೆಚ್ಚಿನ ಪ್ರಭಾವ ಬೀರುತ್ತಿಲ್ಲ. ಇಲ್ಲಿ ಏನಾಗಿದೆ ಎಂದರೆ ಹಿಂದುಳಿದ ಜನಾಂಗ ಬಹಳ, ಇಲ್ಲಿ ಜನಸಂಖ್ಯೆಯೂ ಬಹಳ, ಸಮಸ್ಯೆಗಳೂ ಬಹಳ. ಅಭಿವೃದ್ಧಿ ದೃಷ್ಟಿಯಿಂದ ಬಹಳ ಹಿಂದುಳಿದ ಪ್ರದೇಶ. ಇವತ್ತು ಯಾವ ಉದ್ದೇಶಕ್ಕಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಮಾಡಿದ್ದೇವೆ, ಆ ಉದ್ದೇಶವನ್ನು, ಗುರಿಯನ್ನು ಮುಟ್ಟಬೇಕಾದರೆ, ಆ ಭಾಗದ ಅಭಿವೃದ್ಧಿ ಉನ್ನತಿ ಆಗಬೇಕಾದರೆ, ಹೆಚ್ಚಿನ ಹಣವನ್ನು ನಿಮ್ಮ ಮುಂಗಡಪತ್ರದಲ್ಲಿ ಕೊಡಬೇಕಾಗಿತ್ತು. ಈಗ ತಾವು ತಿದ್ದುಪಡಿಯನ್ನು ತಂದಿರಿ. ನಾನು ಆ ಭಾಗದಲ್ಲಿ ಹೋಗಿದ್ದೆ. ಆ ಸಮಯದಲ್ಲಿ ಡೆವಲಪ್‌ಮೆಂಟ್ ಕಮೀಷನರ್ ಸೆಕ್ರಟರಿ, ಡಿವಿಜನಲ್ ಕಮಿಷನರ್ ಅವರು ಗುಲ್ಬರ್ಗಾದಿಂದ ಹಣ ರಿಲೀಸ್ ಮಾಡುವವರು ನಾಲ್ಕು ಜಿಲ್ಲೆಗಳಿಗೆ. ಡಿವಿಜನಲ್ ಕಮಿಷನರ್ ಹಣ ಬಿಡುಗಡೆ ಮಾಡಿದರೆ ಜಿಲ್ಲೆಯಲ್ಲಿ ನಾಲ್ಕೈದು ಏಜೆನ್ಸಿಗಳು. ಲ್ಯಾಂಡ್ ಆರ್ಮಿ, ಬಿ.ಡಿ.ಓ. ಜಿಲ್ಲಾಪರಿಷತ್, ಪಿ.ಡಬ್ಲ್ಯೂ.ಡಿ., ಸ್ಟೇಟ್ ಹೈವೇಸ್. ಇವುಗಳನ್ನು ಮಾನಿಟರಿಂಗ್ ಮಾಡುವವರು ಯಾರು? ಇದು ಹಣ ಏನು ಬಿಡುಗಡೆ ಮಾಡುತ್ತಿದ್ದೀರಿ, ಅದನ್ನು ಮಾನಿಟರಿಂಗ್ ಮಾಡುವುದಕ್ಕೆ ಯಾರೂ ಇಲ್ಲ. ಇದರ ಬಗ್ಗೆ ಸೂಪರ್‌ವಿಷನ್ ಮಾಡುವುದಕ್ಕೆ ಯಾರೂ ಇಲ್ಲ. ಬೆಂಗಳೂರಿನಿಂದ ಏನು ಹಣ ಹೋಗುತ್ತದೆ, ಡಿವಿಜನಲ್ ಕಮಿಷನರ್ ಅವರು ನೇರವಾಗಿ ಈ ಇಲಾಖೆಗಳಿಗೆ ಹಣ ಕೊಡುತ್ತಿದ್ದರು. ಡಿ.ಸಿ.ಗೆ ಏನೂ ಅಧಿಕಾರ ಇಲ್ಲ. ಡೆಪ್ಯುಟಿ ಕಮಿಷನರ್ ಅವರಿಗೆ ಸೂಪರ್‌ವಿಷನ್ ಮಾಡುವುದಕ್ಕೆ ಅಧಿಕಾರ ಇದೆಯೋ? ಇಲ್ಲ. ಐದು ಬೇರೆಬೇರೆ ಸರ್ಕಾರದ ಏಜೆನ್ಸಿಗಳು ಏನಿವೆ, ಅವರ ಮೇಲೆ ಹಿಡಿತ ಇಟ್ಟುಕೊಳ್ಳವುದಕ್ಕೆ, ಅವರಿಗೆ ಹಣ ಕೊಟ್ಟಿರುವುದು ಮಿಸ್‌ಯೂಸ್ ಆಗುತ್ತಿಲ್ಲ. ಸರಿಯಾಗಿ ಉಪಯೋಗ ಆಗುತ್ತಿದೆ, ಮಿಸ್‌ಯುಟಿಲೈಸೇಷನ್ ಆಗುತ್ತಿಲ್ಲ ಎಂದು ಮಾನಿಟರಿಂಗ್ ಮಾಡುವುದಕ್ಕೆ ಯಾರೂ ಇಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಸ್ವಲ್ಪ ಅಧಿಕಾರ ಕೊಡಬೇಕಾಗಿತ್ತು. ಐದು ಏಜೆನ್ಸಿಗಳಿವೆ, ಮಾನಿಟರಿಂಗ್ ಮಾಡುವವರು ಇಲ್ಲ. ಡಿವಿಜನಲ್ ಕಮಿಷನರ್ ಅವರು ಹೇಳಿದರು, ನಮಗೆ ಹಣ ಬಂದರೆ, ನಾನು ನೇರವಾಗಿ ಅದನ್ನು ಪಿ.ಡಬ್ಲ್ಯೂ.ಡಿ., ಜಿಲ್ಲಾಪರಿಷತ್ತಿಗೆ ಕೊಡುತ್ತೇನೆ ಎಂದು. ಮಾನಿಟರಿಂಗ್ ಏನು ಮಾಡುತ್ತೀರಿ? ನಾಲ್ಕು ಜಿಲ್ಲೆಗಳಿಗೆ ಅವರು ಹೋಗುವುದು ಯಾವಾಗ? ಮಾನಿಟರಿಂಗ್ ಮಾಡುವುದು ಯಾವಾಗ? ಕೆಲಸಗಳನ್ನು ಕೊಡುವುದು ಯಾವಾಗ? ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟು ಅವರಿಗೆ ಜಿಲ್ಲೆಯಲ್ಲಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಪರಿಶೀಲನೆ ಮಾಡುವುದಕ್ಕೆ, ಇದರ ಬಗ್ಗೆ ಪ್ರೋಗ್ರೆಸ್ ನೋಡುವುದಕ್ಕೆ ಅಧಿಕಾರ ಕೊಡಬೇಕಾಗಿತ್ತು. ಈ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇಲ್ಲ. ಇದರಿಂದಾಗಿ ಹೈದರಾಬಾದ್ ಕರ್ನಾಟಕ ಡೆವಲ್‌ಮೆಂಟ್ ಅಥಾರಿಟಿಯಲ್ಲಿ ಹಣ ಮಿಸ್‌ಯೂಸ್ ಆಗಿದೆ. ರೋಡ್‌ಗಳು, ಸೇತುವೆಗಳಿಗೆ ಇನ್ನತ್ತು ಹಣ ಬಿಡುಗಡೆಯಾಗಿದ್ದರೆ, ಅದು ಸರಿಯಾಗಿ ಉಪಯೋಗ ಆಗಿಲ್ಲ. ಇದನ್ನು ಮಾನಿಟರಿಂಗ್ ಮಾಡುವವರು ಯಾರು? ಒಂದೂ ಕಡೆಯೂ ಅಭಿವೃದ್ಧಿ ಇಲ್ಲ. ಅದೇ ಪ್ರಕಾರ ಗುಲ್ಬರ್ಗಾ ಕಾಣಿಸುತ್ತದೆ, ಅದೇ ಪ್ರಕಾರ ಬಳ್ಳಾರಿ ಕಾಣಿಸುತ್ತದೆ.

ಕಟ್ಟುನಿಟ್ಟಾಗಿ ಮಾನಿಟರಿಂಗ್ ಮಾಡುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ? ಇದನ್ನು ಸಹ ಸ್ಪಷ್ಟವಾಗಿ ತಾವು ಹೇಳಬೇಕಾಗುತ್ತದೆ. ಎಲ್ಲಿ ಮಾನಿಟರಿಂಗ್ ಇಲ್ಲ, ಎಲ್ಲಿ ಸುಪರ್‌ವಿಷನ್ ಇಲ್ಲ, ಅಲ್ಲಿ ಅಭಿವೃದ್ಧಿ ಕಾಣುವುದಕ್ಕೆ ಸಾಧ್ಯವಿಲ್ಲ. ಇವತ್ತು ಈ ಅಥಾರಿಟಿ ಆದನಂತರ ನಿಮಗೆ ಕಮಿಟ್‌ಮೆಂಟ್ ಇದ್ದರೆ, ಮೀಟಿಂಗ್‌ಗಳು ಆಗಬೇಕಾಗಿತ್ತು. ಎಷ್ಟು ಮೀಟಿಂಗ್‌ಗಳುಗಳನ್ನು ಮಾಡಿದ್ದೀರಿ? ಇವತ್ತಿನ ತನಕ ಈ ಬೋರ್ಡ್ ಮೀಟಿಂಗ್ ಆದದ್ದೂ ಒಂದೇ ಒಂದು ಸಲ ಮಾತ್ರ. ಕಳೆದ ಏಳು ತಿಂಗಳ ಒಳಗೆ ತಾವು ಮುಖ್ಯಮಂತ್ರಿಗಳಾದ ಮೇಲೆ ಒಂದು ಸಭೆ ಈ ಬೋರ್ಡ್‌ನಿಂದ ಆಗಿದೆ. ಬೋರ್ಡ್‌ನವರು ಫೆಬ್ರುವರಿಯಲ್ಲಿ ಒಂದು ಸಭೆಯನ್ನು ಮಾಡಿದ್ದಾರೆ. ಏಳು ತಿಂಗಳಲ್ಲಿ ಒಂದು ಸಭೆಯನ್ನು ಕರೆದರೆ, ಯಾವ ಪ್ರಕಾರ ಕೆಲಸ ನಡೆಯಬೇಕು? ಯಾವ ಪ್ರಕಾರ ಮಾನಿಟರಿಂಗ್ ನಡೆಯಬೇಕು?

ಶ್ರೀ ಎಂ. ವೀರಪ್ಪ ಮೊಯಿಲಿ:- ಫೆಬ್ರುವರಿ 92ರಲ್ಲಿ ಆ್ಯಕ್ಟ್ ಪಾಸ್ ಆಯಿತು. First time, the Board was constituted somewhere in January or February. Under the Act, there was no Board at all. It was only an infomral Board. Only by the Executive order of the Government, the Board was constituted. I think, February or March 10th, we have constituted the Board. Statutory Board has come into existence only in March or so.

ಆದ್ದರಿಂದ ಅದು ಆದ ಕೂಡಲೇ, the meeting was convened by the Hon'ble Minister.

ಆ ಬೋರ್ಡ್ ರಚನೆ ಮಾಡದೇ, ಒಂದು ರೀತಿಯ ಕೋ ಆರ್ಡಿನೇಷನ್, ಮತ್ತೊಂದು ಇನ್ನೂ ಇತ್ತು. ಆ ಪರಿಸ್ಥಿತಿ ಬರುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ:- ತಾವೂ ಆ ಭಾಗದಲ್ಲಿ ಹೋಗಿದ್ದೀರಿ; ನಾನೂ ಕೂಡ ಹೋಗಿ ಬಂದಿದ್ದೇನೆ. ಅಲ್ಲಿ ಕೋ ಆರ್ಡಿನೇಷನ್ ಅಲ್ಲ. ಡಿವಿಷನಲ್ ಕಮಿಷನರ್‌ರವರಿಗೆ ನೀವು ಹಣ ಕೊಡುತ್ತೀರಿ. ಅವರು ಏನು ಮಾಡುತ್ತಾರೆ ಎಂಬುದನ್ನು ಹೇಳುತ್ತೇನೆ. The Divisional Commissioner is releasing it to different heads.

ಶ್ರೀ ವೀರಪ್ಪ ಮೊಯಿಲಿ:- ಯಾವುದು ಸ್ಟ್ಯಾಚುಟರಿ ಬೋರ್ಡ್ ಇದ, that has prescribed the necessary infrastructure and, mechanism. In the absence of that, there could not have been any co-ordination. Only on an adhoc basis, the co-ordination work was entrusted to the Divisional Commissioner.

ಈಗ ಪುನಃ ಡಿವಿಷನಲ್ ಕಮಿಷನರ್‌ರವರನ್ನು ಅಲ್ಲಿಗೆ ಕಳುಹಿಸಿದ್ದೇವೆ. ಈಗ ಆ ಬೋರ್ಡ್ ಪ್ರಕಾರ ಯಾರು ಯಾರಿಗೆ ಎಷ್ಟು ಅಧಿಕಾರ, ಹೇಗೆ ನಿರ್ವಹಿಸುವುಕ್ಕೆ ಸಾಧ್ಯವಿದೆ, now that is available. ಆಡ್‌ಹಾಕ್ ಬೇಸಿಸ್ ಮೇಲೆ ಮಾಡಿದರೆ, ತಾವು ಹೇಳಿದಂಥ ಕಂಪ್ಲೇಂಟ್ ಬಂದೇ ಬರುತ್ತದೆ. ನಾವು ನಿರ್ವಹಿಸುವುದಕ್ಕೆ ಆಗುವುದಿಲ್ಲ. Now it is institutionalised because of the creation of Statutory Board. Functions have been defined.

ಸರಿಯಾದಂಥ ಅಧಿಕಾರ ಕೊಡದೇ ಇದ್ದರೆ, ಹೇಗೆ ನಿರ್ವಹಿಸುತ್ತಾರೆ? There was no monitoring ಯಾರಿಗೆ, ಏನು ಅಧಿಕಾರ ನಿರ್ವಹಿಸಬೇಕು; ಅದು ತಾತ್ಕಾಲಿಕವಾಗಿ ಎಕ್ಸಿಕ್ಯೂಟಿವ್ ಆರ್ಡರ್ ಪ್ರಕಾರ ನಿನಾಗುತ್ತದೆ. ಆಯಾಯ ಮರ್ಜಿಯಲ್ಲಿ ಹೋಗುತ್ತದೆ. ಇದಕ್ಕೆ ಏನು ಕಾನೂನು ಮಾಡಿದ್ದೇವೆ. ಆ ಕಾಯಿದೆ

ಮರ್ಜಿಯಲ್ಲಿ ಹೋಗುತ್ತದೆ. ಕಾಯಿದೆ ಮರ್ಜಿಯಲ್ಲಿ ಹೋದಾಗ ಮಾತ್ರ ಅಕೌಂಟಬಿಲಿಟಿ ಬರುತ್ತದೆ. ಆಮೇಲೆ ಸರಿಯಾದಂಥ ಫರ್ಮಾರೆನ್ಸ್ ಬರುತ್ತದೆ. ಯಾರು ಯಾರನ್ನು ಎಂಬ ಬಗ್ಗೆ ಕಾನೂನು ಇಲ್ಲದಿದ್ದರೆ, ಕಾನೂನಿನ ಬಲ ಇಲ್ಲದಿದ್ದರೆ, ನಾವು ಹತೋಟಿಯಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕಾಗಿ ನಾವು ತಂದಿದ್ದೇವೆ. ನೀವು ದೋಷ ಹೇಳಿದ್ದು ಸರಿ, ಅದನ್ನು ನಾವು ನಿರಾಕರಿಸುವುದಿಲ್ಲ. ಈ ದೋಷವನ್ನು ಇವತ್ತು ನಿವಾರಿಸಲಿಕ್ಕೆ ನಾವು ಕಾಯಿದೆ ತಂದಿದ್ದೇವೆ. ಈ ಕಾಯಿದೆ ಪ್ರಕಾರ ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಹೇಳಿದ್ದುದನ್ನು ಒಪ್ಪಿಕೊಳ್ಳುತ್ತೇನೆ. ನಾನು ಏನು ಹೇಳುತ್ತಿದ್ದೇನೆಂದರೆ, ಹಣ ದುರುಪಯೋಗವಾಗಿದೆ, ಮಾನಿಟರಿಂಗ್ ಮಾಡುವುದಕ್ಕಾಗಿಲ್ಲ. ಸೂಪರ್‌ವಿಷನ್ ಮಾಡುವುದಕ್ಕಾಗಿಲ್ಲ. ಹಣ ಅಭಿವೃದ್ಧಿ ಕೆಲಸಗಳಿಗೆ ಸರಿಯಾಗಿ ಉಪಯೋಗವಾಗಿಲ್ಲ. ಈ ಬಗ್ಗೆ ತನಿಖೆ ಮಾಡಬೇಕಾಗುತ್ತದೆ.

Sri M. Veerppa Moily:- On 31st January 1993 it was constituted.

ಶ್ರೀ ಆರ್. ವಿ. ದೇಶಪಾಂಡೆ:- ನಾನು ಸರ್ಕಾರಕ್ಕೆ ಏನು ಹೇಳುತ್ತಿದ್ದೇನೆಂದರೆ, ತಾವೇನು ಹಣ ರಿಲೀಸ್ ಮಾಡಿದ್ದೀರಿ. ಅದು ಸರಿಯಾಗಿ ಉಪಯೋಗವಾಗಿದೆಯೇ ಇಲ್ಲವೇ ಎಂಬುದರ ಬಗ್ಗೆ ಸರ್ಕಾರದ ತನಿಖೆ ನಡೆಯಬೇಕಾಗುತ್ತದೆ. ಇವತ್ತು ನಾನು ರೋಪ್ ಕಂಡೀಷನ್ ಬರುತ್ತದೆಂದು ಹೇಳಿದೆ; ಅಭಿವೃದ್ಧಿ ಕುಂಠಿತವಾಗಿದೆ ಎಂದು ಹೇಳಿದೆ. ಇವತ್ತು ನಾನು ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ಅಲ್ಲಿ ನಾನು ಹೋದಾಗ, ನನ್ನ ಗಮನಕ್ಕೆ ಏನು ಬಂದಿದೆ ಎಂಬುದನ್ನು ಹೇಳುತ್ತೇನೆ. ನೀವು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಹಣವನ್ನು ವಿಡುಗಡೆ ಮಾಡುತ್ತೀರಿ. ಇದರಲ್ಲಿ ಸ್ಕೂಲ್ ರೂಮುಗಳು, ಹೈಸ್ಕೂಲು ಕಟ್ಟಡಗಳು ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಆ ಕೆಲಸಗಳನ್ನು ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ. ಆದರೆ, ಆ ಭಾಗದಲ್ಲಿ ನೀರಾವರಿಗೆ, ಪತ ನೀರಾವರಿಗೆ ಹೆಚ್ಚಿನ ಒತ್ತು ಮತ್ತು ಮಹತ್ವ ಕೊಡಬೇಕು. ಅದೇ ಪ್ರಕಾರ, ಕೆರೆಗಳಲ್ಲಿನ ಹೂಳೆತ್ತುವ ಕೆಲಸಕ್ಕೆ ಪ್ರಾಧಾನ್ಯತೆ ಕೊಟ್ಟಿಲ್ಲ. ಅದೇ ಪ್ರಕಾರ, ಡ್ರೈಲ್ಯಾಂಡ್ ಯೋಜನೆ ಬಗ್ಗೆ ನಮ್ಮ ಕಾಲದಲ್ಲಿ, ಡ್ರೈಲ್ಯಾಂಡ್ ಬೋರ್ಡ್ ಮಾಡಿ, ಒಣ ಬೇಸಾಯ ಯೋಜನೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟಿದ್ದೆವು. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿನಿಂದ, ಒಣ ಬೇಸಾಯ ಯೋಜನೆಗಳು ಪ್ರೈಯಾರಿಟಿ ಮೇಲೆ ನಡೆಯುತ್ತಾ ಇಲ್ಲ. ಆ ಭಾಗದ ಅಭಿವೃದ್ಧಿಯಾಗಬೇಕಾದರೆ, ಡ್ರೈಲ್ಯಾಂಡ್ ಯೋಜನೆಗೆ ಹೆಚ್ಚಿನ ಮಹತ್ವ ಕೊಡಬೇಕು. ಆ ಕೆಲಸ ಕೂಡ ಆಗುತ್ತಾ ಇಲ್ಲ. ಈ ಕೆಲಸಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಮತ್ತು ಸರ್ಕಾರ ಮತ್ತೊಂದು ಕ್ಲಾಸ್ ಹಾಕಿದೆ, ಅದೇನೆಂದರೆ,

(iv) empowering the State Government to issue such directions, in the public interest, to the Board which are necessary to carry out the purpose of the Act and other consequential amendments.

ಇದರ ಅವಶ್ಯಕತೆ ಏನಿತ್ತು? ಸರ್ಕಾರ ಯಾವುದೇ ಒಂದು ಆದೇಶವನ್ನು ಕೊಡಬಹುದು. ನೀವು ಡೀಸೆಂಟ್ರಿಲೈಸೇಷನ್‌ನಲ್ಲಿ ವಿಶ್ವಾಸವಿದೆಯೆಂದು ಹೇಳುತ್ತೀರಿ. ಮತ್ತೆ ಇದಕ್ಕೆ ಒಂದು ಚೇರ್ಮನ್ ಮಾಡುತ್ತೀರಿ, ಬೋರ್ಡ್ ಮಾಡುತ್ತೀರಿ. ಇವರು ನಿರ್ಣಯ ತೆಗೆದುಕೊಂಡ ನಂತರ ಪುನಃ ಈ ರೀತಿ ಮಾಡತಕ್ಕಂಥ ಅವಶ್ಯಕತೆ ಏನಿತ್ತು? ಇದು remote control. indirectly you are trying to take it back. ಪುನಃ ಅಧಿಕಾರ ಕೊಟ್ಟಿರಿ. ಆದರೆ ನಿಮ್ಮ 1ನೇ , 2ನೇ, 4ನೇ ತಿದ್ದುಪಡಿಗಳ ಏನೇನೂ ಆವಶ್ಯಕತೆ ಇಲ್ಲ. 3ನೇ ತಿದ್ದುಪಡಿಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ ಕೆಲವು non-governmental organisations ಇವೆ. ಅದು ತಾವು ಹೇಳಿದ ಹಾಗೆ, ಕಪಾರ್ಡ್ ಇರಬಹುದು. ಬೇರೆ ಬೇರೆ ಸಂಸ್ಥೆಗಳೇನಿವೆ, ಅವುಗಳನ್ನು ಇನ್‌ವಾಲ್ವ್ ಮಾಡಬೇಕಾದರೆ, ಅದಕ್ಕೆ ತಿದ್ದುಪಡಿ ಬೇಕಾಗಿತ್ತು. ಈ ತಿದ್ದುಪಡಿಯನ್ನು ನಾನು ಸ್ವಾಗತ

ಮಾಡುತ್ತೇನೆ. ಆದರೆ, ಈವತ್ತು ಹೆಚ್.ಕೆ.ಡಿ.ಬಿ. ಬಗ್ಗೆ, ಆ ಭಾಗದ ಅಭಿವೃದ್ಧಿ ಬಗ್ಗೆ ತಮಗೇನೂ ಚಿಂತನೆ ಇಲ್ಲವೆನ್ನುವ ಅಭಿಪ್ರಾಯಕ್ಕೆ ನಾನು ಬರಬೇಕಾಗಿದೆ.

ತಾವು ಬರೇ ಸ್ಲೋಗನ್ ಕೊಡಬಹುದು. ಟಾರ್ಗೆಟ್ ರೀಚ್ ಮಾಡಬಹುದು. ಆದರೆ ಸರ್ಕಾರದಿಂದ ಈ ಭಾಗಗಳ ಅಭಿವೃದ್ಧಿ ಬಗ್ಗೆ ಯಾವ ಪ್ರಯತ್ನವೂ ಆಗಿಲ್ಲ. ಆದ್ದರಿಂದ ಈ ಮಸೂದೆ ಬಗ್ಗೆ ಇಷ್ಟು ಹೊತ್ತು ಹೇಳುತ್ತಾ ನಾನು ನನ್ನ ವಿರೋಧವನ್ನು ಸೂಚಿಸುತ್ತೇನೆ.

ಶ್ರೀ ಬಾದರಳಿ ಹಂಪನಗೌಡ ಪಾಟೀಲ್(ಸಿಂಧನೂರು):- ಈ ದಿವಸ ಹೆಚ್.ಕೆ.ಡಿ.ಬಿ. ತಿದ್ದುಪಡಿ ಮಸೂದೆ ತಂದಿದ್ದಾರೆ. ನಾನು ಈ ವಿಧೇಯಕದ ಬಗ್ಗೆ ಹೇಳಬೇಕೆಂದರೆ ವಿರೋಧ ಮತ್ತು ಪರ ಎಂಬುದಕ್ಕಿಂತ ಅಲ್ಲಿರತಕ್ಕಂಥ ಕೆಲವು ನ್ಯೂನ್ಯತೆಗಳನ್ನು ತಪ್ಪುಗಳನ್ನು ಸರಿ ಮಾಡಿಕೊಂಡು ಹಿಂದುಳಿದಿರತಕ್ಕಂಥ ಪ್ರದೇಶಕ್ಕೆ.ಆ ಭಾಗ ಏನು ಇದೆ ಆ ಭಾಗವನ್ನು ಅಭಿವೃದ್ಧಿ ಪಡಿಸುವಲ್ಲಿ ನಾವೆಲ್ಲರೂ ಪ್ರಯತ್ನ ಮಾಡಬೇಕು. ಈ ಒಂದು ಅಭಿವೃದ್ಧಿ ಮಂಡಲಿ ಅಲ್ಲಿಗೆ ಬಂದು ಸುಮಾರು 3-4 ವರ್ಷಗಳಾದವು. 1989ನೇ ಇಸವಿಯಲ್ಲಿ ಅಭಿವೃದ್ಧಿ ಮಂಡಲಿ ಮಾಡಬೇಕು; ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಆಗಬೇಕು ಎಂದು ಹೇಳಿ ಪ್ರತಿ ವರ್ಷ ಈ ಒಂದು ಮಂಡಲಿಗೆ ಸರ್ಕಾರ 60-65 ಕೋಟಿ ರೂಪಾಯಿಗಳ ಹಣ ಬಿಡುಗಡೆ ಮಾಡುತ್ತಿದೆ. ಮಾನ್ಯ ಅಧ್ಯಕ್ಷರೇ, ಅಭಿವೃದ್ಧಿ ಮಂಡಲಿ ಹೊಸದಾಗಿ ಪ್ರಾರಂಭವಾಗಿ ಯೋಜನೆಗಳನ್ನು ರೂಪಿಸುವಾಗ ಸರಿಯಾಗಿ ಯೋಜನೆಗಳನ್ನು ಮಾಡದೇ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿರತಕ್ಕಂಥ ಕೆಲವೊಂದು ಹಳೆಯ ಯೋಜನೆಗಳನ್ನು ಆದರಲ್ಲಿ ಸೇರಿಸಿ 375 ಕೋಟಿ ರೂಪಾಯಿಗಳನ್ನು ಒಳಗೊಂಡ ಯೋಜನೆಗಳನ್ನು ರೂಪಿಸಿದರು. ಪ್ರತಿ ವರ್ಷ 65 ಕೋಟಿ ರೂಪಾಯಿಗಳನ್ನು ಕೊಡುತ್ತಾ ಬಂದರೆ ಇನ್ನು 10 ವರ್ಷಗಳಾದರೂ ಅಭಿವೃದ್ಧಿ ಕೆಲಸ ಮುಗಿಸುವುದಕ್ಕಾಗುವುದಿಲ್ಲ. ಇದು ಅಲ್ಲಿರತಕ್ಕಂಥ ಮೂಲ ಭೂತವಾದ ಸಮಸ್ಯೆ. ಇದರ ಜೊತೆಗೆ ಹಿಂದೆ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಸಭೆ ನಡೆಯಿತು. ನಂತರ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ಸಭೆ ನಡೆಯಿತು. ಈಗ ಮಾನ್ಯ ಮೊಯ್ಲಿಯವರು ಮುಖ್ಯ ಮಂತ್ರಿಗಳಾದ ಮೇಲೆ ಒಂದು ಸಭೆ ಕರೆದಿದ್ದರು. ಶ್ರೀ ಎಂ.ಪಿ. ಪ್ರೋಪ್ರಡೆಯವರು ಮಂಡಲಿಯ ಅಧ್ಯಕ್ಷರಾದ ಮೇಲೆ ಅವರೂ ಕೂಡ ಒಂದು ಸಭೆ ಕರೆದರು. ಅಲ್ಲಿರತಕ್ಕಂಥ ಒಟ್ಟಾರೆ ಸದಸ್ಯರ ಅಭಿಪ್ರಾಯ ಏನೆಂದರೆ ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ಮೊದಲು ಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ಹಣ. ಈ ಹಣವನ್ನು ಒದಗಿಸಿಕೊಳ್ಳಲು ಸಚಿವರು ಶಾಸಕರು ಎಲ್ಲರೂ ಸೇರಿ ಪ್ರತಿ ವರ್ಷ ಹೆಚ್ಚು ಹಣ ಒದಗಿಸುವಂತೆ ಮುಖ್ಯ ಮಂತ್ರಿಗಳ ಮೇಲೆ ಒತ್ತಾಯ ತರಬೇಕೆಂದು ನಿರ್ಣಯ ಮಾಡಿದರು. ಆ ದೃಷ್ಟಿಯಿಂದ ಈ ಮಂಡಲಿಗೆ ಹೆಚ್ಚು ಹಣ ಕೊಡಬೇಕು. ಈ ಒಂದು ಸಭೆಯನ್ನು 3 ತಿಂಗಳಿಗೆ ಒಮ್ಮೆ ಕರೆಯತಕ್ಕಂಥ ವ್ಯವಸ್ಥೆ ಮಾಡಬೇಕು. ಇದರಲ್ಲಿ ಏನು ಇದೆ ಅಂದರೆ, ಕಾರ್ಯದರ್ಶಿಗಳು, ಅವರು ಅಧ್ಯಕ್ಷರ ಅಪ್ಪಣೆ ಪಡೆದು ಸಭೆ ಕರೆಯಬೇಕೆಂದು ಇದೆ. ನಿರ್ದಿಷ್ಟವಾಗಿ 3 ತಿಂಗಳಿಗೆ ಒಂದು ಸಲ ಸಭೆ ಕರೆದು ಅನುಷ್ಠಾನ ಸಮಿತಿಯನ್ನು ಮಾಡಬೇಕು. ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ಅಲ್ಲಿ ಆಗಿರತಕ್ಕಂಥ ಲೋಪ ದೋಷಗಳನ್ನು ಸರಿಪಡಿಸಿ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಇಲ್ಲದಿದ್ದರೆ ಕೆಲಸ ಕುಂಠಿತವಾಗುತ್ತದೆ. ನಿಜ ಇವೆಲ್ಲವನ್ನೂ ಸರಿಮಾಡಬೇಕಾದರೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ಅಲ್ಲಿ ಆಗಿರತಕ್ಕಂಥ ಲೋಪ ದೋಷಗಳನ್ನು ಸರಿಪಡಿಸಿ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಇಲ್ಲದಿದ್ದರೆ ಕೆಲಸ ಕುಂಠಿತವಾಗುತ್ತದೆ. ನಿಜ ಇವೆಲ್ಲವನ್ನೂ ಸರಿ ಮಾಡಬೇಕಾದರೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಡಬೇಕು. 3 ತಿಂಗಳಿಗೆ ಒಂದು ಸಲ ಸಭೆ ಮಾಡುವ ವ್ಯವಸ್ಥೆ ಮಾಡಬೇಕು. ಪ್ರತಿ ವರ್ಷ ಹೆಚ್ಚಿನ ಹಣ ಒದಗಿಸಿ ಕೆಲಸ ಮಾಡಬೇಕೆಂದು ನಮ್ಮ ಭಾಗದಲ್ಲಿರತಕ್ಕಂಥ ಸಚಿವರು ಮತ್ತು ಶಾಸಕರು ಪ್ರಯತ್ನ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ) :- ಮಾನ್ಯ ಅಧ್ಯಕ್ಷರೇ, ಸರ್ಕಾರ ಮಂಡಿಸಿರತಕ್ಕಂಥ ತಿದ್ದುಪಡಿಯ ಬಗ್ಗೆ ನಾನು ಎರಡು ಮಾತುಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಮುಖ್ಯವಾಗಿ ಬೀದರ್, ಗುಲ್ಬರ್ಗಾ, ಹಾಗೂ ರಾಯಚೂರು ಬಹಳ ಹಿಂದುಳಿದ ಪ್ರದೇಶಗಳು. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರ ಸರ್ಕಾರ ಇದ್ದಾಗ ಪ್ರತಿಯೊಂದು ಜಿಲ್ಲೆಗೂ ಒಬ್ಬ ಮಂತ್ರಿಗಳು ಅಂತ ಹೇಳಿ ನಾವು ಮಾಡಿದ್ದೆವು. ಆಗ ನಾವು ಕೆ.ಡಿ.ಪಿ ಮೀಟಿಂಗ್ ಅನ್ನು ಒಂದು ತಿಂಗಳಿಗೆ ಅಥವಾ ಎರಡು ತಿಂಗಳಿಗೆ ಕರೆದು ಅಲ್ಲಿ ರಿವ್ಯೂ ಮಾಡಿ ಬರುತ್ತಿದ್ದೆವು. ಈ ದೃಷ್ಟಿಯಿಂದ ನಾನು ಎರಡು ವರ್ಷಗಳ ಕಾಲ ಬೀದರ್ ಜಿಲ್ಲೆಯ ಇನ್‌ಚಾರ್ಜ್ ಮಂತ್ರಿಯಾಗಿದ್ದೆ. ಜೊತೆಗೆ ಬೀದರ್ ಮತ್ತು ಗುಲ್ಬರ್ಗಾ ಬಗ್ಗೆ ನಾನು ಕಳೆದ 21 ವರ್ಷಗಳಿಂದ ನಿರಂತರವಾಗಿ ಪ್ರವಾಸ ಮಾಡಿ ಅಲ್ಲಿನ ಸಮಸ್ಯೆಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿರತಕ್ಕಂಥವನು. ನಿಜವಾಗಿ ಹೇಳಬೇಕಾದರೆ ಅಲ್ಲಿನ ಜನರ ಪರಿಸ್ಥಿತಿ ಬಹಳ ಕಷ್ಟ. ಅಲ್ಲಿ ವಿಶೇಷವಾಗಿ ನಮ್ಮ ಬೀದರ್ ಮತ್ತು ಗುಲ್ಬರ್ಗಾ ಭಾಗದಲ್ಲಿ ಬರತಕ್ಕಂಥ ಮಹಾರಾಷ್ಟ್ರ ಪಕ್ಕದಲ್ಲಿ ಬರತಕ್ಕಂಥ ಮರಾಠವಾಡ ರೀಜನ್ ಆಗಲೀ ಅಥವಾ ಆಂಧ್ರ ಪ್ರದೇಶದ ಪಕ್ಕದಲ್ಲಿ ಬರತಕ್ಕಂಥ ನಿಜಾಮದ ಏರಿಯಾ ಆಗಲಿ. ಬಹಳ ಹಿಂದುಳಿದಿರತಕ್ಕಂಥ ಪ್ರದೇಶಗಳು. ಅವು ನೀರು ಕಾಣದೆ ಇರತಕ್ಕಂಥ ಪ್ರದೇಶಗಳು. ಬಾದಾಮಿ, ಭಾಲ್ಕಿ, ಹುಮ್ನಾಬಾದ್ ಪಕ್ಕದಲ್ಲಿರತಕ್ಕಂಥ ಮಹಾರಾಷ್ಟ್ರದ ಪ್ರದೇಶಗಳಲ್ಲಾಗಲೀ ಅಥವಾ ಆಂಧ್ರ ಪ್ರದೇಶಗಳಲ್ಲಾಗಲೀ ಈವತ್ತಿಗೂ ಸಹಿತಾ ಒಂಟೆಗಳ ಮೇಲೆ ಪ್ರಯಾಣ ಮಾಡತಕ್ಕಂಥಾದ್ದು ಸ್ವಾಭಾವಿಕವಾಗಿದೆ. ನಮ್ಮ ಖರ್ಗೆಯವರ ಸ್ವಂತ ಊರಿನಲ್ಲಿ ಇವತ್ತಿಗೂ ಸಹಿತಾ ಒಂಟೆಗಳ ಮೇಲೆ ಪ್ರಯಾಣ ಮಾಡತಕ್ಕಂಥಾದ್ದು ಅಪರೂಪವೇನಲ್ಲ. ಇತ್ತೀಚೆಗೆ ಬಸ್ ಹಾಕಿಸಿರಬಹುದು ಅಷ್ಟೇ. ಒಂಟೆಗಳ ಮೇಲೆ ಪ್ರಯಾಣ ಮಾಡತಕ್ಕಂಥಾದ್ದನ್ನು ನಾವು ನೋಡುತ್ತೇವೆ. ಮತ್ತು ಅಲ್ಲಿ ವಿದ್ಯುಚ್ಛಕ್ತಿ ತಲುಪತಕ್ಕಂಥಾದ್ದೇ ಬಹಳ ಕಷ್ಟ. ಕುಡಿಯುವ ನೀರಿಗೂ ಅಲ್ಲಿ ಕಷ್ಟದ ಪರಿಸ್ಥಿತಿ ಇದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಮಾತನ್ನು ಕೇಳಿದರು. ನೀವು ಮಂತ್ರಿಗಳಾಗಿದ್ದಿರಿ; ನೀವು ಏನು ಮಾಡಿದ್ದೀರಿ ನಿಮಗೆ ಇದರಲ್ಲಿ ಮಾತನಾಡುವುದಕ್ಕೆ ನೈತಿಕವಾದ ಹಕ್ಕು ಏನಿದೆ ಎನ್ನುವ ಅರ್ಥದಲ್ಲಿ ಮಾತನಾಡಿದರು. ಇಲ್ಲಿ ಗುಲ್ಬರ್ಗಾ ಮತ್ತು ಬೀದರ್ ಕಡೆಯಿಂದ ಬಂದಿರುವ ಶಾಸಕರು ಮತ್ತು ಮಂತ್ರಿಗಳಿದ್ದೀರಿ. ಖರ್ಗೆಯವರೇ ತಾವು ಗುಂಡೂರಾಯರ ಸರ್ಕಾರದಲ್ಲಿದ್ದಾಗ ಇಂಡಿಯಾ ಪಾಪ್ಯುಲೇಷನ್ ಪ್ರಾಜೆಕ್ಟ್ ಮಂಜೂರಾಗಿ ಅಲ್ಲಿಗೇ ನಿಂತು ಹೋಗಿತ್ತು. ನಾನು ಆರೋಗ್ಯ ಮಂತ್ರಿಯಾಗಿದ್ದಾಗ ಶಂಕರಾನಂದ ಅವರ ಜೊತೆಯಲ್ಲಿ ಮಾತನಾಡಿ ಬೀದರ್, ಗುಲ್ಬರ್ಗಾ, ಬಿಜಾಪುರ, ಬೆಳಗಾಂ. ಈ ಜಿಲ್ಲೆಗಳಿಗೆ ಉಪಯೋಗವಾಗತಕ್ಕಂಥ ಕಾರ್ಯಕ್ರಮವನ್ನು ನಾವು ಪುನರ್ ಪ್ರಾರಂಭ ಮಾಡಿಸಿದ್ದು ತಮಗೆ ಜ್ಞಾಪಕ ಇರಬಹುದು. ಅಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಮತ್ತು ಬೀದರ್‌ನಲ್ಲಿರತಕ್ಕಂಥ ಕಾರಂಜ ಪ್ರಾಜೆಕ್ಟ್ ಅನ್ನು ಬಿಟ್ಟರೆ ತುಂಗಭದ್ರ ನೀರನ್ನು ರಾಯಚೂರು, ಮತ್ತು ಬಳ್ಳಾರಿಗೆ ಕೊಟ್ಟಿರುವುದನ್ನು ಬಿಟ್ಟರೆ ಈ 4 ಜಿಲ್ಲೆಗಳಲ್ಲಿ ನಿಜವಾಗಿಯೂ ಸಹಿತಾ ಅಭಿವೃದ್ಧಿಯಾಗಿಲ್ಲ. ಈ ಕಡೆ ಮತ್ತು ಆ ಕಡೆ ಕುಳಿತಿರತಕ್ಕಂಥ ಶಾಸಕರುಗಳು ನಮ್ಮ ಕರ್ನಾಟಕವನ್ನು ಬಹಳ ನೆಗ್ಲೇಟ್ ಮಾಡಿದ್ದೀರಿ. ಎಲ್ಲಾ ಬೆಂಗಳೂರು ಸುತ್ತಮುತ್ತ ಮಾತ್ರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಹಿಂದುಳಿದಿದೆ ಎನ್ನತಕ್ಕಂಥ ದೃಷ್ಟಿಯಿಂದಾಗಿ ಅವರ ಹೇಳಿಕೆಯನ್ನು, ಅವರ ನೋವನ್ನು ಅರ್ಥ ಮಾಡಿಕೊಂಡು ನಾನು ಅದನ್ನು ಸ್ವಾಗತ ಮಾಡುತ್ತೇನೆ. ಇವತ್ತು ಎಷ್ಟೇ ಹಣ ಆದರೂ ಪರವಾಗಿಲ್ಲ, ಒಂದೊಂದು ತಾಲ್ಲೂಕಿಗೆ ಒಂದಲ್ಲ, 4 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ, ಅದಕ್ಕೆ ನಮ್ಮದೇನೂ ತಕರಾರಿಲ್ಲ. ನಾವು ಸಹಿತ ಸಚಿವರಾಗಿದ್ದಾಗ ಅದನ್ನು ಮಾಡಿ ತೋರಿಸಿದ್ದೇವೆ. ಮಾನ್ಯ ಖಂಡ್ರೆಯವರೇ ತಮಗೆ ಗೊತ್ತಿದೆ. ಔರಾದ್‌ನಲ್ಲಿ, ಬಸವಕಲ್ಯಾಣದಲ್ಲಿ, ಹುಮ್ನಾಬಾದ್‌ನಲ್ಲಿ, ಬೀದರ್‌ನಲ್ಲಿ, ನಾನು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ ಒಂದೂವರೆ ಕೋಟಿ ರೂಪಾಯಿಗಳನ್ನು ಪ್ರತಿಯೊಂದು ಊರಿಗೂ ಖರ್ಚು ಮಾಡಿ, ಶಹಬಾದ್‌ನಲ್ಲಿ, ಚಿಂಚೋಳಿಯಲ್ಲಿ ಸುಸಜ್ಜಿತವಾದ ಬಸ್ ಸ್ಯಾಂಡ್‌ಗಳನ್ನು ಕಟ್ಟಿದ್ದೆವು. ಬೀದರ್, ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಹಳ್ಳಿಗಳಿಗೂ ಬಸ್ ವ್ಯವಸ್ಥೆ ಕೊಡಬೇಕೆಂದು ನಾವು ನ್ಯಾಷನಲೈಸ್ ಮಾಡಿದೆವು. ನಿಜಾಮರ ಕಾಲದ ನಂತರ ತಮಗೆ ಗೊತ್ತಿದ್ದ ಹಾಗೆ ಅಲ್ಲಿ

ಇನ್‌ಫ್ರಾಸ್ಟ್ರಕ್ಚರೇ ಡೆವಲಪ್ ಆಗಿರಲಿಲ್ಲ. ಇಡೀ ಹಮ್ನಾಬಾದ್‌ನಲ್ಲಿರ ತಕ್ಕಂಥ ಒಂದು ಬಸ್ ಡಿಪೋ ಬಿಟ್ಟರೆ ಇಡೀ ಆ ಜಿಲ್ಲೆಯಲ್ಲಿ ಎಲ್ಲೂ ಸಹಿತಾ ಬಸ್ ಡಿಪೋ ಇರಲಿಲ್ಲ. ಕಲ್ಬುರ್ಗಿನಲ್ಲಿ ಒಂದು ಬಸ್ ಡಿಪೋ ಬಿಟ್ಟರೆ ಅಲ್ಲಿಬಸ್ ಡಿಪೋ ಅನ್ನತಕ್ಕಂಥಾದ್ದೇ ಇರಲಿಲ್ಲ. ಸ್ವಾತಂತ್ರ್ಯ ಬಂದ 42 ವರ್ಷಗಳಿಂದ ಟೋಟಲ್ ಆಗಿ ನೆಗ್ಲೆಟ್ ಆದ ಏರಿಯಾ ಅದು. ರಾಜಕೀಯವಾಗಿ ಎರಡು ಸಾರಿ ಅಲ್ಲಿಂದ ಮುಖ್ಯ ಮಂತ್ರಿಗಳಾಗಿದ್ದಾರೆ. ಅನೇಕ ಜನ ಮಂತ್ರಿಗಳಾಗಿದ್ದಾರೆ. ಆದರಲ್ಲಿ ಸಂಶಯನೇ ಇಲ್ಲ. ಆದರೆ ಅಲ್ಲಿ ಆಗಿರತಕ್ಕಂಥ ಕೆಲಸವೇನು ಎಂದು ನಾವು ವಿಚಾರ ಮಾಡಿ ನೋಡಿದಾಗ ಏನೇನೂ ಆಗಿಲ್ಲ. ಇವತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ಮಾತನಾಡಬೇಕೆಂದು ಹೇಳಿದರೆ ನಾವು ಯಾವ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿ ಫಲವನ್ನು ಪಡೆಯಬೇಕೆಂದು ಹೇಳಿದ್ದೆವೋ ಆ ಫಲವನ್ನು ಪಡೆಯುವುದಕ್ಕೆ ಬದಲಾಗಿ ಬೇರೆ ಕಡೆಗೆ ಖರ್ಚಾಗಿರುವುದು ನಿಮಗೂ ಗೊತ್ತಿರತಕ್ಕಂಥ ವಿಚಾರ ಹಾಗೂ ನಮಗೂ ಗೊತ್ತಿರತ್ಕಂಥ ವಿಚಾರ. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದು, ತಮ್ಮಿಂದ ಈ ಕೆಲಸ ಆಗಬೇಕು. ರಾಮಕೃಷ್ಣ ಹೆಗಡೆಯವರಿದ್ದಾಗ ಒಂದು ಕೆಲಸ ಮಾಡಿದ್ದರು. ನಾವು ರಾಮಕೃಷ್ಣ ಹೆಗಡೆಯವರ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತೇವ. ಏಕೆಂದರೆ, ದೇವರಾಜ ಅರಸುರವರು ನಿಮ್ಮ 4 ಜನರನ್ನು ಯಾವ ರೀತಿ ರಾಜಕೀಯವಾಗಿ ಬೆಳೆಸಿದರೋ ಅದೇ ರೀತಿ ನಮಗೂ 4 ಜನಕ್ಕೆ ರಾಮಕೃಷ್ಣ ಹೆಗಡೆಯವರು ಬೆಳೆಸಿದ್ದಾರೆ. ನೀವು ಅದರಲ್ಲಿ ಬೆಳೆದಿರತಕ್ಕಂಥವರು ಒಬ್ಬರು. ನೀವು ಕಾರ್ಕಳದವರಾದರೂ ಸಹಿತ, ಬೆರದ್ ನನ್ನದು. ಬಾಲ್ಕಿ ನನ್ನದು. ಬೀದರ್ ನನ್ನದು ಎಂದು ಮುಖ್ಯಮಂತ್ರಿಗಳು ಆಗಿರುವವರ ಮನಸ್ಸಿನಲ್ಲಿ ಬರಬೇಕು. ಆ ಕಾರಣದಿಂದ ಎಂದು ವಿಚಾರವನ್ನು ಬಹಳ ಖಚಿತವಾಗಿ ಹೇಳುತ್ತಿದ್ದೇನೆ. ನೀವು ಮುಖ್ಯ ಮಂತ್ರಿಗಳು ಆಗಿರತಕ್ಕಂಥಾದ್ದು ನಮಗೆ ಬಹಳ ಸಂತೋಷದ ಜೊತೆಗೆ ಕನ್ನಡ ಭಾಷೆ ಬಗ್ಗೆ ಬಹಳ ಅಭಿಮಾನ ಇಟ್ಟುಕೊಂಡಿರತಕ್ಕ ಒಬ್ಬ ಮನುಷ್ಯರು ನೀವು. ಆ ಕಾರಣದಿಂದಾಗಿ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಬೀದರ್ ಮತ್ತು ಕಲ್ಬುರ್ಗಿಯಲ್ಲಿ ಕನ್ನಡ ಶಾಲೆ ಬಹಳ ಅಭಿವೃದ್ಧಿಯಾಗಬೇಕಾಗಿದೆ. ಇದನ್ನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಇದರ ಬಗ್ಗೆ ಬಹಳ ಪ್ರಯತ್ನ ಮಾಡಿದ್ದೇನೆ. ನಿಮಗೆ ಗೊತ್ತಿರುವ ಹಾಗೆ ನಾನು ಕನ್ನಡಿಗನಾದರೂ ನಮ್ಮ ತಂದೆ ಮತ್ತು ತಾಯಿ ಮರಾಠಿಯಲ್ಲಿ ಮಾತನಾಡುತ್ತಾರೆ. ನನಗೆ ಅಷ್ಟು ಒಳ್ಳೆಯ ಮರಾಠಿ ಮಾತನಾಡುವುದಕ್ಕೆ ಬರುವುದಿಲ್ಲ. ನಾನು ಬೀದರ್ ಇನ್‌ಚಾರ್ಜ್ ಮಿನಿಸ್ಟರ್ ಆಗಿದ್ದಾಗ ನನ್ನ ಮರಾಠಿ ಬಗ್ಗೆ ಅವರು ತಮಾಷೆ ಮಾಡುತ್ತಿದ್ದರು. ನಾನು ಕನ್ನಡದಲ್ಲೇ ಮಾತನಾಡುತ್ತಿದ್ದೆ. ಅವರಿಗೆ ಅರ್ಥವೇ ಆಗುತ್ತಿರಲಿಲ್ಲ. ನಾನು ಕೇಳಿದೆ. ನೀವು ಕರ್ನಾಟಕದಲ್ಲಿ ಇದ್ದೀರಿ. ಎಂ.ಇ.ಎಸ್ ಸಂಪೂರ್ಣವಾಗಿ ಅಲ್ಲಿ ವಿಸರ್ಜನೆ ಮಾಡಿದ್ದಾರೆ. ನೀವು ಕರ್ನಾಟಕದ ನೆಲದಲ್ಲಿರುವುದರಿಂದ ನೀವು ಕನ್ನಡ ಭಾಷೆ ಕಲಿಯಬೇಕೆಂದು ಹೇಳಿದಾಗ, ಅಲ್ಲಿ ಇರುವ ಕನ್ನಡ ಶಾಲೆಗಳ ಪರಿಸ್ಥಿತಿ ನೋಡಿದಾಗ ಬಹಳ ನೋವಾಗುತ್ತದೆ. ಮಾನ್ಯ ಖಂಡ್ರೆಯವರು ಕನ್ನಡದಲ್ಲಿ ಬಹಳ ಪ್ರಾಮಾಣಿಕವಾಗಿ ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ ಅವರ ಕನ್ನಡ ನಮಗೆ ಅರ್ಥವಾಗತಕ್ಕಂಥಾದ್ದು ಬಹಳ ಕಷ್ಟದ ಕೆಲಸ. ಬಹಳಷ್ಟು ಅವರು ಉರ್ದು ಶೈಲಿಯಲ್ಲೇ ಕನ್ನಡವನ್ನು ಅವರು ಮಾತನಾಡುತ್ತಾರೆ. ಉರ್ದು ಬೆಳೆಸುವುದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ಬೀದರ್ ಮತ್ತು ಕಲ್ಬುರ್ಗಿಯಲ್ಲಿ ಅದು ಒಂದು ಸಂಸ್ಕೃತಿ, ನಿಜಾಮನ ಕಾಲದಿಂದಲೂ ಉರ್ದು ಬೆಳೆದಿದೆ. ಆದರೆ ಮರಾಠಿ ಅಲ್ಲಿ ಬಹಳ ಬೆಳೆಯುತ್ತಿದೆ. ಕನ್ನಡ ಬೆಳೆಯುವುದಕ್ಕೆ ಬೇಕಾದ ಪ್ರೋತ್ಸಾಹ ಅಲ್ಲಿ ಸಿಗುತ್ತಿಲ್ಲ. ಅದಕ್ಕೋಸ್ಕರ ತಾವು ಇದರಲ್ಲಿ ಪ್ರಾವಿಷನ್ ಮಾಡಿಕೊಳ್ಳಬೇಕು. ಇವತ್ತು ಬಿಲ್‌ನಲ್ಲಿ ಇಲ್ಲದೇ ಇರಬಹುದು. ಆದರೆ ಹಣವನ್ನುಕೊಡತಕ್ಕಂಥ ಅಧಿಕಾರ ತಮಗೆ ಇದೆ. ಬೀದರ್ ಮತ್ತು ಕಲ್ಬುರ್ಗಿಯಲ್ಲಿ ಕನ್ನಡವನ್ನು ಬೆಳೆಸುವುದಕ್ಕೆ ಬೇಕಾಗಿರತಕ್ಕಂಥ ಅಗತ್ಯವನ್ನು ಶಾಲೆಯಲ್ಲಿ ಬೇಕಾದ ಇನ್‌ಫ್ರಾಸ್ಟ್ರಕ್ಚರ್‌ನ್ನು ಡೆವಲಪ್ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾನೂ ಪ್ರಯತ್ನ ಮಾಡಿದ್ದೇನೆ. ಹಾಗೂ ಅಲ್ಲಿರುವ ಎಲ್ಲರಿಗೂ ನಾನು ಕನ್ನಡ ಕಲಿಯಬೇಕೆಂದು ಹೇಳಿದ್ದೇನೆ. ಕನ್ನಡ ಕಲಿಯದಿದ್ದರೆ ನಾವು ಏಕೆ ಪಿಎಸ್‌ಸಿನಲ್ಲಿ ಕೆಲಸ ಕೊಡಬೇಕು? ನಿಮಗೆ ಏಕೆ ರೋಡ್ ಮಾಡಿಕೊಡಬೇಕು? ನಿಮಗೆ ಏಕೆ ಕರೆಂಟ್ ಕೊಡಬೇಕು ಎಂದು ಪಬ್ಲಿಕ್ ಮೀಟಿಂಗ್‌ಗಳಲ್ಲಿ ಬೀದರ್‌ಗೆ

ಹೋದಾಗ ಹೇಳತಕ್ಕಂಥ ಕೆಲಸವನ್ನು ನಾನು ಮಾಡಿದ್ದೇನೆ. ತಮಗೆ ಗೊತ್ತಿರುವ ಹಾಗೆ ಮೊದಲು ಮದ್ರಾಸ್ ರಾಜ್ಯದಲ್ಲಿ ಬಳ್ಳಾರಿ ಇದ್ದುದರಿಂದ ಬಹಳಷ್ಟು ಜನ ವ್ಯವಹಾರಗಳನ್ನೂ ತೆಲುಗು ಭಾಷೆಯಲ್ಲೆ ಮಾಡುತ್ತಾರೆ. ಆಂಧ್ರದಿಂದ ಅನೇಕರು ಅನೇಕ ಕಾರಣಗಳಿಗೋಸ್ಕರ ಎರುತ್ತಾರೆ. ಅದಕ್ಕೆ ರಾಜಕೀಯ ಬಣ್ಣವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಆದರೆ ರಾಜಕೀಯ ಮಾಡಲಿಕ್ಕೂ ಸಹಿತ ಬರುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿರುವ ಹಾಗೆ ಸ್ಯಾಟಲೈಟ್ ಟೌನ್‌ಗಳೆಂದು ರಾಯಚೂರಿನಲ್ಲಿ ಬಹಳ ಡೆವಲಪ್ ಆಗಿವೆ. ಅವರದು ಪವರ್‌ಫುಲ್ ಲಾಬಿ ಡೆವಲಪ್ ಆಗಿದೆ. ಅವರೆಲ್ಲರೂ ಕನ್ನಡ ಕಲಿಯಲಿಕ್ಕೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವ ರೀತಿ ಮಾಡಬೇಕೆಂಬುದರ ಬಗ್ಗೆ, ಭಾಷೆಯ ಅಭಿಮಾನ ಇರತಕ್ಕಂಥ ನೀವು ಇದನ್ನು ವಿಚಾರ ಮಾಡಬೇಕು. ತಾವು ಇದಕ್ಕೆ ಅವಕಾಶ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಖಿಂಡ್ರಯವರಲ್ಲಿ ನನ್ನದು ವಿಶೇಷವಾದ ವಿನಂತಿ. ನಿಮಗೆ ಮಹಮ್ಮದ್ ಅಲಿ ಅವರ ಕಾಲದಲ್ಲಿ ಸಾಕಷ್ಟು ಕೆಲಸ ಆಗಿದೆ. ಅವರು ಇವತ್ತು ಸತ್ತು ಸ್ವರ್ಗದಲ್ಲಿದ್ದಾರೆ; ಅವರು ಒಳ್ಳೆ ಕೆಲಸ ಮಾಡಿದ್ದಾರೆ. ರಾಜ್ಯದ ಉತ್ತಮ ಸೇವೆ ಮಾಡಿದ್ದಾರೆ. ಆದರೆ ನಿಮ್ಮ ಏರಿಯಾದಲ್ಲಿ ಅಂದರೆ ಬೀದರ್, ಗುಲ್ಬರ್ಗಾ, ರಾಯಚೂರಿನಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಕಮ್ಯುನಿಕೇಷನ್ ದೃಷ್ಟಿಯಿಂದ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಇಲ್ಲ. ನೀವು 15 ಕೋಟಿ ರೂಪಾಯಿ ತೆಗೆದುಕೊಂಡು ಹೋಗಿ. ಅದರಿಂದ ಏನೂ ತೊಂದರೆಯಾಗುವುದಿಲ್ಲ. ಬೇಸಿಗೆ ಕಾಲದಲ್ಲಿ ಬಸ್ ಸ್ಟ್ಯಾಂಡ್‌ಗಳಲ್ಲಿ ಸಾವಿರಾರು ಜನರು ಮಲಗಿ ಜೀವನ ತಳ್ಳತಕ್ಕಂಥ ಜನ ಆ ಪ್ರದೇಶಗಳಲ್ಲಿದ್ದಾರೆ. ಲಂಗೋಟಿಗಳನ್ನು, ಆ ಕೆಂಪು ಬಟ್ಟೆಗಳನ್ನು ನೋಡಿದಾಗ ನಮಗೇ ಅಯ್ಯೋ ಎನಿಸುತ್ತದೆ. ನೀವು ಎಷ್ಟು ಬೇಕಾದರೂ ಕೆಎಸ್‌ಆರ್‌ಟಿಸಿಯಿಂದ ದುಡ್ಡು ತೆಗೆದುಕೊಂಡು ಹೋಗಿ ಅಲ್ಲಿಗೆ ಬೇಕಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರನ್ನು ಡೆವಲಪ್ ಮಾಡಿಕೊಳ್ಳಬೇಕೆಂದು ನಿಮ್ಮಲ್ಲಿ ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳೇ, ಅಲ್ಲಿ ಸ್ಪೇಟ್ ಹೈವೇ ಮತ್ತು ನ್ಯಾಷನಲ್ ಹೈವೇ, ನಾನು ಮಂಗಳೂರಿಗೆ ಕಂಪೇರ್ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಮಂಗಳೂರಿನಲ್ಲಿ ಬುದ್ಧಿವಂತ ಜನ, ಅಲ್ಲಿಲ್ಲಿಗೇ ಒಂದು ವಿಶೇಷವಾದ ಸಂಸ್ಕೃತಿ, ವಿಶೇಷವಾದ ಪರಂಪರೆ ಎಲ್ಲಾ ಇರುವುದರ ಜೊತೆಗೆ ಪ್ರಬಲವಾದ ನಾಯಕತ್ವ ಇದೆ. ಟಿಎಪೈ ಇವರು ಇರಬಹುದು, ಶ್ರೀನಿವಾಸ ಮಲ್ಯ ಅವರು ಇರಬಹುದು. ಇವರೆಲ್ಲಾ ದೊಡ್ಡ ಹೋರಾಟವನ್ನು ಮಾಡಿ ದೆಹಲಿಯಿಂದ ದುಡ್ಡನ್ನು ತಂದು ಮದ್ರಾಸ್ ಪ್ರಾವಿನ್ಸ್‌ನಲ್ಲಿ ಇದ್ದಾಗ ಸಾಕಷ್ಟು ಡೆವಲಪ್ ಮಾಡಿದ್ದಾರೆ. ಕಲ್ಬುರ್ಗಿ ಮತ್ತು ಶಹಪುರದಲ್ಲಿರತಕ್ಕಂಥ ರಸ್ತೆಯಲ್ಲಿ ಇವತ್ತಿಗೂ ಸಹಿತಾ ಲಕ್ಷುರಿ ಬಸ್‌ನಲ್ಲಿ ಹೋಗತಕ್ಕಂಥಾದ್ದು ರಾತ್ರಿ ಹೊತ್ತು, ಅದು ದೊಡ್ಡ ಹಿಂಸೆ. ಎತ್ತಿ ಹಾಕುತ್ತಿರುತ್ತದೆ. ಆ ಕಡೆ ಹೋದರೆ ಬಂದ ನಂತರ 2 ದಿನ ರೆಸ್ಟ್ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಎಂಎಲ್‌ಎಗಳು ಹೇಗೆ ಹೋಗುತ್ತಾರೋ ಹೇಗೆ ಬರುತ್ತಾರೋ ಗೊತ್ತಿಲ್ಲ. ಇದಕ್ಕೆ ವಿಶೇಷವಾಗಿ ಹಣವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ಕಲವು ದಿನಗಳ ಕಾಲ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಮತ್ತು ಮಾರ್ಕೆಟಿಂಗ್ ಫೆಸಿಲಿಟೀಸ್ ಮಾಡಿಕೊಟ್ಟರೆ ಒಳ್ಳೆಯದು. ನಾನು ಸುಮಾರು 5-6 ತಿಂಗಳ ಹಿಂದೆ ನಮ್ಮ ದೇಶದ ರಕ್ಷಣಾ ಮಂತ್ರಿಗಳಾದ ಶರದ್ ಪವಾರ್ ಅವರನ್ನು ಭೇಟಿ ಮಾಡಿದಾಗ ಅವರು ನನ್ನ ಬಗ್ಗೆ ಬಹಳ ಒಂದು ರೀತಿಯಲ್ಲಿ ಲೇವಡಿ ಮಾಡಿ ಮಾತನಾಡಿದರು. ನೀವೆಲ್ಲಾ ರಾಜಕಾರಣಿಗಳು ಎಂಎಲ್‌ಎಗಳು ಮತ್ತು ಎಕ್ಸ್ ಮಿನಿಸ್ಟರ್‌ಗಳು ಎಂದು ಹೇಳಿಕೊಳ್ಳುತ್ತೀರಿ. ಆದರೆ ರೈತರುಗಳನ್ನು ಇಂಡಿವಿಷುಯಲ್ ಆಗಿ ಡೆವಲಪ್ ಮಾಡುವುದಕ್ಕೆ ನೀವು ಏನು ಇನ್‌ಸ್ಟಿಟ್ಯೂಷನ್‌ಗಳನ್ನು ಕಟ್ಟಿದ್ದೀರಿ? ಹಾರ್ಟಿಕಲ್ಚರ್‌ಗೆ ನಿಮ್ಮ ಬೀದರ್, ಗುಲ್ಬರ್ಗಾ, ಬಿಜಾಪುರ, ರಾಯಚೂರು ಪ್ರದೇಶದಲ್ಲಿ ಇರತಕ್ಕಂಥ ಅವಕಾಶ ಇಡೀ ದೇಶದಲ್ಲಿ ಇಲ್ಲ. ಆದರೆ ನೀವು ಅದಕ್ಕೆ ಏನೂ ಮಾಡುತ್ತಿಲ್ಲ. ಬರೀ ಎಂಪಿಗಳು ಆಗುವುದು, ಎಂಎಲ್‌ಎಗಳು ಆಗುವುದು ಇಷ್ಟೇ ಕೆಲಸ ಮಾಡುತ್ತಿದ್ದೀರಿ; ಇದರ ಕಡೆ ಗಮನ ಕೊಡಬೇಕೆಂಬ ಮಾತನ್ನು ಹೇಳಿದಾಗ ನನ್ನ ಬಗ್ಗೆಯೇ ನಾನು ಯೋಚನೆ ಮಾಡಬೇಕೆಂದು ನನಗೆ ಅನ್ನಿಸಿತು. ನಾನು ಏಕೆ ಕೃಷ್ಣಪ್ಪನವರಿಗೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈಗ ದಾಳಿಂಬೆ ತಳಿ ಬಂದಿದೆ. ಇವತ್ತು ದ್ರಾಕ್ಷಿ ಬೊಂಬಾಯಿಗೆ ಹೋಗುತ್ತಿದೆ. ಕೋಟ್ಯಾಂತರ ರೂಪಾಯಿಗಳನ್ನು

ನಮ್ಮ ಬಿಜಾಪುರ ರೈತರಿಗೆ ಕೊಡುತ್ತಿರ ತಕ್ಕಂಥ ದಾಳಿಂಬೆ ಮತ್ತು ದ್ರಾಕ್ಷಿಯನ್ನು ಕಲ್ಬುರ್ಗಿ ಮತ್ತು ಬೀದರ್‌ನಲ್ಲಿ ಬೆಳೆಸುವುದಾದಲ್ಲಿ ಇವತ್ತು ಯಾವ ರೀತಿ ಮಂಡ್ಯ ಮುಂದೆ ಬಂದಿದೆ. ಬೆಂಗಳೂರು ನಗರ ಯಾವ ರೀತಿ ಮುಂದೆ ಬಂದಿದೆ, ಆ ರೀತಿಯಾಗಿ ನಮ್ಮ ಸಹೋದರರು ಸಹಿತ ಮುಂದೆ ಬರಬೇಕು ಎನ್ನತಕ್ಕಂಥದ್ದು ನಮ್ಮ ಆಸೆ. ನಮ್ಮ ನಾಯಕರಾದಂತಹ ಮಾನ್ಯ ದೇಶಪಾಂಡೆಯವರು ಡ್ರೈಲ್ಯಾಂಡ್ ಫಾರ್ಮಿಂಗ್‌ಗೆ ಬಹಳ ಮಹತ್ವವನ್ನು ಕೊಡಬೇಕೆಂದು ಹೇಳಿ ನಿಮ್ಮ ಕಳೆದ ವರ್ಷದ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಹಣವನ್ನು ಖರ್ಚು ಮಾಡಿರತಕ್ಕಂಥದ್ದನ್ನು ನಾನು ನೋಡಿದ್ದೇನೆ. ಅದು ಬಹಳ ಕಡಿಮೆ; ಈ ವರ್ಷ ರೈತರು ಕಣ್ಣಲ್ಲಿ ನೀರನ್ನು ಹಾಕಿಕೊಂಡಿರುವ ವಿಷಯ ನಿಮಗೂ ಸಹಿತ ಗೊತ್ತಿರತಕ್ಕಂಥ ವಿಚಾರ. ಆ ಭಾಗದಲ್ಲಿ ಒಳ್ಳೆಯ ಎಣ್ಣೆಕಾಳುಗಳನ್ನು ಬೆಳೆಸಲಿಕ್ಕೆ ಹಾರ್ಟಿಕಲ್ಚರಲ್ ಕ್ರಾಪ್ಸ್‌ಗೆ ಬಹಳ ಅವಕಾಶ ಇದೆ. ಇದನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸಹೋದ್ಯೋಗಿಗಳಾದ ಬಸವರಾಜ್ ಪಾಟೀಲ್ ಅಟ್ಟೂರ್‌ರವರಿಗೆ ಒಂದು ಮಾತನ್ನು ಕೊಟ್ಟಿದ್ದರು. ನಾನು ಪಬ್ಲಿಕ್ ಸರ್ವೀಸ್ ಕಮಿಷನ್ ಹಾಗೆ ಒಂದು ಸಪರೇಟ್ ರಿಕ್ರೂಟ್‌ಮೆಂಟನ್ನು ಈ ರೀಜನ್‌ಗೆ ಮಾಡುತ್ತೇನೆಂದು ಹೇಳಿದರು. ಅವತ್ತು ನಾನು ಸ್ವಾಗತ ಮಾಡಬೇಕೆಂದು ಇದ್ದೆ, ಮಾನ್ಯ ಅಧ್ಯಕ್ಷರು ಸಮಯದ ಅಭಾವದಿಂದ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಲಿಲ್ಲ. ಅದು ನಿಜವಾಗಿಯೂ ಸಹಿತ ಒಂದು ಒಳ್ಳೆಯ ತೀರ್ಮಾನ. ಆ ಭಾಗದ ಜನಗಳ ಡೆವಲಪ್‌ಮೆಂಟ್‌ಗೆ ಎಲ್ಲಾ ಡೆವಲಪ್‌ಮೆಂಟ್ ವರ್ಕ್ ಆಗಲಿಕ್ಕೆ ರಿಕ್ರೂಟ್‌ನ್ನು ಮಾಡಬೇಕು. ಆ ಕಡೆಯವರಿಗೆ ಮಾಡಿ; ಈ ಕಡೆಯವರಿಗೆ ಮಾಡಬೇಕು ಅಂತ ಇಲ್ಲ, ಅದಕ್ಕೋಸ್ಕರ ನೀವು ಎಷ್ಟು ಬೇಕಾದರೆ ರಿಲ್ಯಾಕ್ಸ್ ಮಾಡಿಕೊಳ್ಳಿ. ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ಅದೊಂದೇ ನಾನು ಕೇಳತಕ್ಕಂಥದ್ದು; ಬೀದರ್, ಗುಲ್ಬರ್ಗಾದಲ್ಲಿ ಯಾವುದೇ ಪ್ರಾಜೆಕ್ಟ್ ನೋಡಿದರೂ ಸಹಿತ 4-5 ಡಿಪಾರ್ಟ್‌ಮೆಂಟಿಗೆ ಒಬ್ಬರೇ ಅಧಿಕಾರಿಗಳು ಇರುತ್ತಾರೆ. ಅಲ್ಲಿಗೆ ವೈದ್ಯರುಗಳು ಹೋಗುವುದಿಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜ್ ಹಾಸ್ಪಿಟಲ್‌ನ್ನು ಮತ್ತು ಗುಲ್ಬರ್ಗ ಮೆಡಿಕಲ್ ಕಾಲೇಜು ಹಾಸ್ಪಿಟಲನ್ನು ನೋಡಿದಾಗ ನಮಗೆ ಬಹಳ ದುಃಖವಾಗುತ್ತದೆ. ತಹಸೀಲ್ದಾರರಿಗೆ ಹಾಗೂ ಬಿಡಿಒಗಳಿಗೆ ತೊಂದರೆಯನ್ನು ಕೊಡಬೇಕು ಅಂದರೆ ಗುಲ್ಬರ್ಗಕ್ಕೆ ಹಾಕಿಬಿಡಿ, ಬೀದರ್‌ಗೆ ಹಾಕಿಬಿಡಿ ಅಂತ ಹೇಳಿ ನಮ್ಮದು ಒಂದು ಅಪ್ರೋಚ್ ಇದೆ. ಅದು ತಪ್ಪು, ಅದು ಹೋಗಬೇಕು. ಆ ಕಾರಣದಿಂದಾಗಿ ಆ ರಿಕ್ರೂಟ್‌ಮೆಂಟ್ ಬೋರ್ಡನ್ನು ಆದಷ್ಟು ಬೇಗ ಮಾಡಬೇಕು. ಜನವರಿ 31ನೇ ತಾರೀಖು ಈ ಸ್ಯಾಚ್ಯುಟರಿ ಆಕ್ಟ್‌ನ ಮೂಲಕವಾಗಿ ಈ ಬೋರ್ಡಿಗೆ ಒಂದು ಜೀವನವನ್ನು ಕೊಟ್ಟಿದ್ದೀರಿ, ಇದು ನಿಜವಾಗಿಯೂ ಸಹಿತ ಒಳ್ಳೆಯ ಕೆಲಸವನ್ನು ತಾವು ಮಾಡಿದ್ದೀರಿ. ನಾವು ಇದನ್ನು ಮೆಚ್ಚುತ್ತೇವೆ. ಇದರಲ್ಲಿ ಪಕ್ಷದ ಪ್ರಶ್ನೆ ಬರುವುದಿಲ್ಲ. ಈಗ ಕಬಾರ್ಡ್ ಅಂತ ಸಂಸ್ಥೆಯಿಂದ ದುಡ್ಡನ್ನು ತೆಗೆದುಕೊಳ್ಳತಕ್ಕದ್ದು. ನಮ್ಮವರೇ ಅದರ ಅಧ್ಯಕ್ಷರು ಅಂತ ಕಾಣುತ್ತದೆ. ಸರೋಜಿನಿ ಮಹಿಷಿಯವರು ಅವರಿಗೆ ಹೇಳಿದರೆ ನಮಗೆ ಹಣವನ್ನು ಕೊಡುತ್ತಾರೆ. ಕಬಾರ್ಡ್ ಅಷ್ಟೇ ಅಲ್ಲ, ಬೇರೇ ಬೇರೆ ಇಂಟರ್‌ನ್ಯಾಷನಲ್ ಏಜೆನ್ಸಿಯಿಂದ ಹಣವನ್ನು ಕೊಡತಕ್ಕಂಥ ಸಂಸ್ಥೆಗಳಿಂದಲೂ ಸಹಿತ ಹಣವನ್ನು ತರಲಿಕ್ಕೆ ತಾವೇನು ತಿದ್ದುಪಡಿಯನ್ನು ತರಲಿಕ್ಕೆ ಇಲ್ಲಿ ಯೋಚನೆ ಮಾಡಿದ್ದೀರಿ ಅದನ್ನು ನಾನು ಸ್ವಾಗತಮಾಡುತ್ತೇನೆ. ಅನಿವಾರ್ಯವಾದ ಸಂದರ್ಭಗಳಲ್ಲಿ ಮಾತ್ರ ಬೆಂಗಳೂರಿನಲ್ಲಿ ಸಭೆಯನ್ನು ಮಾಡಬೇಡಿ. ಬಾಕಿ ಸಂದರ್ಭಗಳಲ್ಲಿ ಸಭೆಗಳನ್ನು ಮಾಡಿದರೆ ಅದರ ದುರುಪಯೋಗವಾಗಬಹುದು; ಅದನ್ನು ಮಾಡಬಾರದು ಅನ್ನತಕ್ಕ ಒಂದು ಎಚ್ಚರಿಕೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ.

ನಿಮಗೆ ಉಳಿದಿರುವುದು 15-16 ತಿಂಗಳುಗಳು ತಾವು ಏನೋ ಒಂದು ಚಿತ್ರವನ್ನು ಬದಲಾವಣೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದೀರಿ. ಅದು ಕೇವಲ ಕೃತಿಯಿಂದ ಆಗಬೇಕೇ ಹೊರತು ಮಾತಿನಿಂದ ಆಗುವುದಿಲ್ಲ. ಆ ದೃಷ್ಟಿಯಿಂದಾಗಿ ನಾನು ವಿಧೇಯಕವನ್ನು ತೀವ್ರವಾಗಿ ವಿರೋಧವನ್ನು ಮಾಡದೆ ಈ ಸಲಹೆ ಸೂಚನೆಗಳನ್ನು ಇದರ ಬಗ್ಗೆ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):- ನಿಮ್ಮ ಕಾಲದಲ್ಲಿ ತಾವು ಮಂತ್ರಿಯಾಗಿದ್ದಾಗ, ಆ ಭಾಗವನ್ನು ಮುಂದಕ್ಕೆ ತರುವ ಸಲುವಾಗಿ ಬಹಳಷ್ಟು ಪ್ರಯತ್ನ ಮಾಡಿದ್ದೀರಿ. ಅದಕ್ಕೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆ ಭಾಗ ಹಿಂದುಳಿದಿರುವ ಕಾರಣದಿಂದ ಎಷ್ಟು ಬೇಕು ಅಷ್ಟನ್ನು ಖರ್ಚು ಮಾಡಿ ಅಂತ ಹೇಳಿರುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಹೇಳಿದ್ದೇನೆ. ನಮ್ಮ ಏರಿಯಾ ಬಹಳ ಹಿಂದುಳಿದಿದ ಅದಕ್ಕಾಗಿ ರೋಡು ಬೇಕು ಮತ್ತು ಎಲ್ಲಾ ಅಭಿವೃದ್ಧಿ ಕಾರ್ಯಗಳು ಆಗಬೇಕು. ಸಂಪೂರ್ಣವಾಗಿ ಡಿಸ್ಟ್ರಿಕ್ಟ್‌ಗಳನ್ನು ನ್ಯಾಷನಲೈಸ್ ಮಾಡಬೇಕು ಅಂತ ಅಂದರೂ ರೋಡೆ ಇಲ್ಲದ ಕಾರಣದಿಂದ ಕಷ್ಟವಾಗುತ್ತದೆ. ಅದಕ್ಕಾಗಿ ರೋಡನ್ನು ಮಾಡಬೇಕಾಗಿದೆ.

ಶ್ರೀ ಬಸವಗೌಡ ಅಮರೇಗೌಡ (ಮಾನ್ವಿ):- ಮಾನ್ಯ ಅಧ್ಯಕ್ಷರೇ, ಇಪತ್ತಿನ ದಿವಸ ಈ ವಿಧೇಯಕವನ್ನು ತರುತ್ತಿರುವುದು ಸ್ವಾಗತಾರ್ಹವಾದಂತಹ ವಿಷಯ. ಹೈದರಾಬಾದ್ ಕರ್ನಾಟಕದಲ್ಲಿ ನಮ್ಮ ಭಾಗದಲ್ಲಿ ಕೆಲವೊಂದು ಅಭಿವೃದ್ಧಿ ಕೆಲಸಗಳು ಆಗಬೇಕಾದರೆ ಮೊನ್ನೆ ನಮ್ಮ ಹೈದರಾಬಾದ್ ಕರ್ನಾಟಕ ಡೆವಲೆಪ್‌ಮೆಂಟ್ ಬೋರ್ಡಿನ ಅಧ್ಯಕ್ಷರಾದಂತಹ ಮಾನ್ಯ ಘೋರ್ಪಡೆಯವರು ಮೀಟಿಂಗ್ ಮಾಡಿ ಸುಮಾರು ಇನ್ನು ಇಲ್ಲಿಗೆ ತೆಗದುಕೊಂಡಿರತಕ್ಕಂಥ ಕೆಲಸಕ್ಕೆ ಸುಮಾರು 200 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಅಂದಾಜು ಮಾಡಲಾಗಿದೆ. ನಾವು ಪ್ರತಿವರ್ಷವೂ ಕೂಡ 60-70 ಕೋಟಿ ರೂಪಾಯಿಯನ್ನು ಕೊಟ್ಟರೂ ಸಹಿತ ಸುಮಾರು ಇನ್ನು 4 ವರ್ಷ ಅದರ ಕೆಲಸ ಮಾಡಬೇಕಾಗುತ್ತದೆ. ಎಷ್ಟೋ ಕೆಲಸಗಳು ಕೂಡ ಪ್ರಾರಂಭವಾಗಿದೆ. ಅಲ್ಲಿ ಸರಿಯೊದಂತಹ ವಾಹನ ಸೌಕರ್ಯ ಇಲ್ಲ. ಇನ್ನು ಇತರೇ ಸಾಮಾನುಗಳು ಇಲ್ಲದ ಕಾರಣ ಕೆಲಸಗಳು ಕೂಡ ಮಂದಗತಿಯಲ್ಲಿ ನಡಯುತ್ತಿವೆ. ಅದನ್ನು ಸರಿಪಡಿಸತಕ್ಕಂಥ ಪ್ರಯತ್ನ ಮಾಡಬೇಕು. ಜಿಲ್ಲಾಧಿಕಾರಿಗಳಿಗೆ ಅಲ್ಲಿ ಅಧಿಕಾರವನ್ನು ಕೊಟ್ಟು ಮಾಡಿಸಬೇಕು. ಮಾನ್ಯ ಮಂತ್ರಿಗಳು ಹಾಗೂ ನಮ್ಮ ಭಾಗದವರು ಎಲ್ಲರೂ ಇದ್ದಾರೆ. ಅದರ ಬಗ್ಗೆ ಪ್ರತಿ ತಿಂಗಳು ಅಥವಾ ಎರಡು ಮೂರು ತಿಂಗಳಿಗಾದರೂ ಅದರ ಕೆಲಸದ ಅಸುಷ್ಠಾನದ ಬಗ್ಗೆ ರಿವ್ಯೂ ಮೀಟಿಂಗ್ ಮಾಡಿ ಯಾವ ರೀತಿ ಅಲ್ಲಿ ಕೆಲಸ ನಡೆಯುತ್ತಿದೆ ಎನ್ನುವುದನ್ನು ನೋಡಿಕೊಳ್ಳಬೇಕು. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ಇನ್ನಿತರ ಶಾಸಕರುಗಳು, ಎಂ ಎಲ್ ಎ., ಎಂ.ಪಿ.ಗಳನ್ನು ಕರದು ಕೆಲಸ ಯಾವ ರೀತಿಯಿಂದ ಮಾಡುತ್ತಿದ್ದಾರೆಂದು ಪರಿಶೀಲಿಸಬೇಕು. ಕೆಲಸ ಕಳಪ ಪ್ರಮಾಣದಲ್ಲಿ ನಡೆಯುತ್ತಿದೆ ಎಂದು ಬಹಳಷ್ಟು ದೂರು ಇದೆ. ಅದನ್ನು ಸರಿಪಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಈಗಾಗಲೇ ಬಹಳಷ್ಟು ಹಳೆಯ ಕೆಲಸಗಳನ್ನು ತೆಗದುಕೊಂಡಿದ್ದಾರೆ; ಈ ವರ್ಷವೂ ಕೂಡ ನಾವು ಹೊಸ ಕಾಮಗಾರಿಗಳನ್ನು ತೆಗದುಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಇವತ್ತು ಯಂತ್ರೋಪಕರಣದ ತೊಂದರೆ ನಮ್ಮ ಭಾಗದಲ್ಲಿ ಬಹಳಷ್ಟು ಇದೆ. ಈಗ ಕೆಲಸ ನಡೆದಿದೆ. ಅಲ್ಲಿ ಯಂತ್ರಗಳು ಇಲ್ಲ, ಇನ್ನಿತರ ಸಾಮಾನುಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಅಲ್ಲಿನ ಜವಾಬ್ದಾರಿಯನ್ನು ಸ್ಥಳೀಯ ಜಿಲ್ಲಾಧಿಕಾರಿಗಳಿಗೆ ರಿವ್ಯೂ ಮಾಡತಕ್ಕಂಥ ಅಧಿಕಾರವನ್ನು ಕೊಟ್ಟರೆ ಇದರಿಂದ ಕೆಲಸ ಪ್ರಗತಿಯಿಂದ ಶೀಘ್ರಗತಿಯಿಂದ ನಡೆಯುತ್ತದೆ ಎಂದು ನಮ್ಮ ಮನಸ್ಸಿಗೆ ಅನ್ನಿಸುತ್ತದೆ. ನಮಗೆ ಈಗ ಕೊಡತಕ್ಕ ಹಣ ಸಾಲದು. ಹೆಚ್ಚಿಗೆ ಕೊಟ್ಟು ಇನ್ನು ಎರಡು ವರ್ಷಗಳಲ್ಲಾದರೂ ನಮ್ಮ ಭಾಗವನ್ನು ಪ್ರಗತಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಬೇರೆ ಬೇರೆ ಇಲಾಖೆಗಳಿಗೆ ಕೆಲಸವನ್ನು ಕೊಟ್ಟಿದ್ದಾರೆ. ಈಗ ಕೆಲವು ಕೆಲಸಗಳನ್ನು ಲೋಕೋಪಯೋಗಿ ಇಲಾಖೆಗೆ ಒಪ್ಪಿಸಿದ್ದಾರೆ. ಇಡೀ ಜಿಲ್ಲೆಗೆ ಒಂದೇ ಒಂದು ಸಬ್‌ಡಿವಿಜನ್ ಮಾಡಿದರೆ ಎಲ್ಲಾ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಆಗುವುದಿಲ್ಲ. ಕೆಲವು ಕೆಲಸಗಳನ್ನು ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ಸ್ ಕಾರ್ಪೊರೇಷನ್‌ನವರಿಗೂ ಕೊಟ್ಟಿದ್ದಾರೆ. ಅದರ ಬಗ್ಗೆ ಸಾಕಷ್ಟು ದೂರು ಬಂದು, ಸಾಕಷ್ಟು ಗೊಂದಲವಾಗಿ ಅಲ್ಲಿ ಕಂಟ್ರಾಕ್ಟರ್ಸುಗಳು ಕೂಡ ಕೆಲಸವನ್ನು ಮಾಡಲಾರದಂತಹ ಪರಿಸ್ಥಿತಿಯಲ್ಲಿದ್ದಾರೆ. ಲೋಕೋಪಯೋಗಿ ಇಲಾಖೆಯವರು ಹೋಗಿ ಅಲ್ಲಿ ಚಕ್ ಮಾಡಬೇಕು. ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ನವರು ಕೆಲಸವನ್ನು ಮಾಡುತ್ತಿದ್ದಾರೆ. ಅದನ್ನೆಲ್ಲಾ ಸರಿಪಡಿಸಲಿಕ್ಕೆ ಅತಿ ಶೀಘ್ರದಲ್ಲಿಯೇ

ಮುಖ್ಯ ಮಂತ್ರಿಗಳು ಮತ್ತು ಸಂಬಂಧಪಟ್ಟ ನಮ್ಮ ಭಾಗದ ಮಂತ್ರಿಗಳು ಒಂದು ಸಭೆಯನ್ನು ಕರೆದು ಇದರ ಬಗ್ಗೆ ಸರಿಯಾದಂತಹ ನಿರ್ಣಯವನ್ನು ತೆಗೆದುಕೊಂಡು ನಮ್ಮ ಭಾಗದ ಅಭಿವೃದ್ಧಿಯನ್ನು ಶೀಘ್ರವಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡು ವರ್ಷದಲ್ಲಿ ಹಣವನ್ನು ಹೆಚ್ಚಿಗೆ ಬಿಡುಗಡೆ ಮಾಡಬೇಕೆಂದು ಇವತ್ತು ತಮ್ಮಮೂಲಕ ತಿಳಿಸಿ,ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಾಟಾಳ್ ನಾಗರಾಜ್(ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಇದು ಬಹಳ ಸಣ್ಣ ತಿದ್ದುಪಡಿಯಾಗಿದ್ದು ಇದರ ಮೇಲೆ ಚರ್ಚೆ ನಡೆದಿದೆ. ಒಂದಂತೂ ಬಹಳ ಸಂತೋಷ ಪಡಬೇಕಾದುದು ಏನೆಂದರೆ 1956 ರಲ್ಲಿ ಕರ್ನಾಟಕ ಏಕೀಕರಣವಾಯಿತು. ಅಲ್ಲಿಂದ ಇಲ್ಲಿಯವರೆಗೆ ಕರ್ನಾಟಕದಲ್ಲಿ ಒಂದು ರೀತಿಯ ಏಕೀಕರಣವಾದರೂ ಯಾವ್ಯಾವ ಪ್ರದೇಶಗಳು ಕರ್ನಾಟಕ ಏಕೀಕರಣಕ್ಕೆ ಬಂದಂತಹ ಪ್ರದೇಶಗಳ ಅಭಿವೃದ್ಧಿಯ ಒಂದು ತೀವ್ರವಾದಂತಹ ಚಿಂತನೆ ನಡೆದಿರಲಿಲ್ಲ. ಇದು ಬಹಳ ಅತ್ಯಂತ ಪ್ರಮುಖವಾದಂಥದ್ದು; ಇವತ್ತು ಈ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯ ಮೂಲಕ ಈ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಸರ್ಕಾರ ಯಾವ ಚಿಂತನೆಯನ್ನು ಇಟ್ಟಿದೆ. ಅದಕ್ಕೆ ನಾನು ಸಂಪೂರ್ಣವಾದಂತಹ ಬೆಂಬಲವನ್ನು ಕೊಡುತ್ತೇನೆ. ಇದಕ್ಕೆ ಎಷ್ಟು ಹಣವನ್ನು ಒದಗಿಸುತ್ತೇವೆ ಎನ್ನತಕ್ಕದ್ದು ಅಲ್ಲ. ಈ ಪ್ರದೇಶಗಳ ಬೆಳವಣಿಗೆಗೆ ಈ ಮಂಡಳಿಯಿಂದ ಯಾವ ಯೋಜನೆ ತಯಾರಾಗುತ್ತಿದೆ. ಆ ಯೋಜನೆಯ ಹಣ ಸಮಗ್ರವಾಗಿ ಅಲ್ಲಿ ವಿನಿಯೋಗವಾಗುವ ರೀತಿಯಲ್ಲಿ ಅದಕ್ಕೆ ಪರಿಣಾಮಕಾರಿಯಾಗಿ ಎಚ್ಚರವಹಿಸಿ ಅದರ ಅಭಿವೃದ್ಧಿಗೆ ತೀಪ್ರತರವಾದಂತಹ ಚಿಂತನೆಯನ್ನು ಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ಇದರ ಜೊತೆಗೆ ಭಾಷೆಯ ಬೆಳವಣಿಗೆಯ ಬಗ್ಗೆ ಈಗಾಗಲೇ ನಮ್ಮ ಸ್ನೇಹಿತರಾದಂತಹ ಮಾನ್ಯ ಸಿದ್ಧರವರು ಹೇಳಿದ್ದಾರೆ. ಇದನ್ನು ನಾನೂ ಮತ್ತೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಭಾಷೆಯ ಬೆಳವಣಿಗೆ ಗಡಿಯ ಪ್ರದೇಶಗಳಲ್ಲಿ ಅತಿಮುಖ್ಯವಾಗಿ ಆಗಬೇಕಾಗಿದೆ. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ. ಅವರಿಗೆ ಗಡಿ ಅಭಿವೃದ್ಧಿ ಬಗ್ಗೆ, ಗಡಿ ಪ್ರದೇಶದ ಬೆಳವಣಿಗೆ ಬಗ್ಗೆ ಗಡಿ ಪ್ರದೇಶದಲ್ಲಿ ಭಾಷೆಯ ಚಿಂತನೆ ಬಗ್ಗೆ ರಾಜ್ಯದಲ್ಲಿ ಭಾಷೆ ಅಭಿವೃದ್ಧಿ ಬಗ್ಗೆ ಒಂದು ಚಿಂತನೆ ಇದೆ. ಅವರು ಮೊದಲಿನಿಂದಲೂ ಸಚಿವರಾಗಿದ್ದಾಗ ಕೂಡ ಭಾಷೆ ಪ್ರಶ್ನೆ ಬಂದಾಗ, ಗಡಿ ಪ್ರಶ್ನೆ ಬಂದಾಗ ಬಹಳ ಮುಕ್ತ ಚಿಂತನೆ ಮಾಡಿದ್ದಾರೆ. ಇವತ್ತು ನಾನು ಅವರನ್ನು ಅತ್ಯಂತ ಪ್ರಾಮಾಣಿಕವಾಗಿ ತಮ್ಮಮೂಲಕ ಅವರ ಗಮನಕ್ಕೆ ತರುತ್ತೇನೆ. ಗಡಿ ಪ್ರದೇಶದ ಅಭಿವೃದ್ಧಿ ಜೊತೆಗೆ ಭಾಷೆ ಬೆಳವಣಿಗೆ ಬಗ್ಗೆ ಒಂದು ವಿಶೇಷವಾದ ಯೋಜನೆ, ಚಿಂತನೆ ಆಗಬೇಕು ಎನ್ನತಕ್ಕಂಥ ಮಾತನ್ನ ಹೇಳಿ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಸಹಕಾರ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ,ಈ ಒಂದು ಮಸೂದೆ ಬಗ್ಗೆ ಚರ್ಚೆ ಮಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಜಿ ಮತ್ತು ಉಪ ನಾಯಕರಾದ ಶ್ರೀಮಾನ್ ಸಿದ್ಧಾಜಿ, ಪಾಟಾಳ್ ನಾಗರಾಜ್ ಹಾಗೆ ಹಂಪನ ಗೌಡರು ಮತ್ತು ಬಸವಣ್ಣಗೌಡರು ಕೂಡ ಹಲವಾರು ಸಲಹೆಗಳನ್ನು ಮಾಡಿದ್ದಾರೆ. ಹೈದರಾಬಾದ್ ಕರ್ನಾಟಕ ಏರಿಯ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕು ಎನ್ನತಕ್ಕಂಥ ಚಿಂತನೆ ಇವತ್ತಿನದಲ್ಲ. ಸುಮಾರು 1980ರಲ್ಲಿ ನಾನು, ಶ್ರೀಮಾನ್ ಧರ್ಮಸಿಂಗ್ ಇಬ್ಬರೂ ಗುಂಡೂರಾವ್ ಸರ್ಕಾರದಲ್ಲಿ ಸಚಿವರಾಗಿದ್ದಾಗ ಬಾಲ ಸುಬ್ರಹ್ಮಣ್ಯಮ್‌ನವರನ್ನು ಸೆಕ್ರೆಟರಿ ಮಾಡಿ ಇಡೀ ದೇಶವನ್ನೆಲ್ಲಾ ಸುತ್ತಾಡಿ ಯಾವ ರೀತಿ ಈ ಒಂದು ಭಾಗವನ್ನು ಅಭಿವೃದ್ಧಿಪಡಿಸಬೇಕು ಮತ್ತು ಎರಡನೆಯದಾಗಿ ತೆಲಂಗಾಣ ಮೂಮೆಂಟ್ ಕೂಡ ಪ್ರಾರಂಭವಾಗಿತ್ತು. ಡಾ|| ಚೆನ್ನಾರೆಡ್ಡಿಯವರದ್ದೂ ಕೂಡ ಇದೇ ವಾದ ಇತ್ತು. ನಮ್ಮ ಭಾಗ ಬಹಳ ಹಿಂದುಳಿದಿದೆ. ನಮ್ಮ ಆಂಧ್ರಕ್ಕೆ ಹೋಲಿಸಿದರೆ ಯಾವ ರೀತಿ ಒಲ್ಡ್ ಮೈಸೂರು ಮತ್ತು ಹೊಸ ಮೈಸೂರು ಭಾಗ ಅಥವಾ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಇದೆಯೋ ಅದೇ ರೀತಿ ಅಲ್ಲೂ ಕೂಡ ತೆಲಂಗಾಣ

ಡೆವಲಪ್‌ಮೆಂಟ್ ಆಗಬೇಕು. ಪ್ರಗತಿಯಾಗಬೇಕು ಎಂದು ಒಂದು [illegible]ರಾಟ ಅಲ್ಲಿ ಪ್ರಾರಂಭವಾಯಿತು. ಅದಕ್ಕಾಗಿ ನಾವು ತಲಂಗಾಣ ಡೆವಲಪ್‌ಮೆಂಟ್ ಬೋರ್ಡ್‌ನಂತೆ ಮಾಡಬೇಕು ಹಾಗೂ ಮರಾಠವಾಡ ಏರಿಯ ಡೆವಲಪ್‌ಮೆಂಟ್ ಬೋರ್ಡ್‌ನಂತೆ ಮಾಡಬೇಕು ಎಂದು ಕ್ರಮ ತೆಗೆದುಕೊಂಡೆವು. ಮರಾಠವಾಡ ಏರಿಯ ಮೊದಲು ಹೈದರಾಬಾದ್ ಸ್ಟೇಟ್‌ನಲ್ಲಿತ್ತು. ಆ ಕಾಲದಲ್ಲಿ ಎಸ್.ಬಿ.ಚೌವ್ಹಾಣ್‌ರವರು [illegible] ಮಿನಿಸ್ಟರ್ ಆಗಿದ್ದರು. ಅವರಿಗೆ ಭೇಟಿಯಾಗಿ ಔರಂಗ್‌ಬಾದ್‌ಗೆ ಹೋಗಿ ನಂತರ ಮುಂದ್‌ಬುನ್, ಪರ್ಬ್ ಜಿಂಗಾಲ್‌ಗೆ ಹೋಗಿ ಎಲ್ಲಾ ಕಡೆ ಸುತ್ತಾಡಿ ಸುಮಾರು 300-400 ಪೇಜ್ ರಿಪೋರ್ಟ್ ತಯಾರು ಮಾಡಿ ಏರಿಯವೈಸ್, ಜಿಯಾಗ್ರಾಫಿಕಲ್ ಎಷ್ಟು ಕಿಲೋ ಮೀಟರ್ ರಸ್ತೆ ನಮ್ಮ ಭಾಗದಲ್ಲಿ ಇದೆ ಎಷ್ಟು ಇರಬೇಕಾಗಿತ್ತು ಎಷ್ಟು ಬಸ್ ಸ್ಟ್ಯಾಂಡ್ ಇವೆ. ಎಷ್ಟು ಸ್ಕೂಲ್‌ಗಳು ಇವೆ. ಎಷ್ಟು ಪ್ರೈಮರಿ ಸ್ಕೂಲ್‌ಬೇಕು. ಎಷ್ಟು ಪ್ರೈಮರಿ ಹೆಲ್ತ್ ಸೆಂಟರ್ ಬೇಕು ಇವೆಲ್ಲವನ್ನೂ ಯೋಚನೆ ಮಾಡಿದ ಮೇಲೆ ಪಾಪ್ಯುಲೇಷನ್ ವೈಸ್ ಪರ್ ಕ್ಯಾಪಿಟಾ ಇನ್‌ಕಮ್ ಏನು ಇದೆ ಲಿಟರರಿ ಪರ್‌ಸೆಂಟೇಜ್ ಏನು ಇದೆ. ಇದೆಲ್ಲಾ ನೋಡಿದ ಮೇಲೆ ಒಂದು ವರದಿ ಕೊಟ್ಟ ಮೇಲೆ ಆ ಒಂದು ಬೋರ್ಡ್ ರಚಿಸಬೇಕೆಂದು ನಿರ್ಧಾರ ಆ ಕಾಲದಲ್ಲೇ ನಾವು ತೆಗೆದುಕೊಂಡಿದ್ದೇವೆ. ಆದರೆ ಕಾರಣಾಂತರದಿಂದ ನಮ್ಮ ಸರ್ಕಾರ ಹೋಯಿತು. ಆ ರಿಪೋರ್ಟ್ ಅಲ್ಲೇ ಉಳಿಯಿತು. 83ರಲ್ಲಿ ತಾವು ಬಂದಿರಿ; ಆಗಲೂ ಕಾರಣಾಂತರದಿಂದ ಅದು ಇಂಪ್ಲಿಮೆಂಟ್ ಆಗಲಿಲ್ಲ. ಪುನಃ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಪುನಃ ಚಿಂತನೆ ನಡೆಸಿ ಹೈ ಪವರ್ ಕಮಿಟಿ ಎಂದು ಮಾಡಿದೆವು. ಆಗ ಈ ವಿಧೇಯಕ ಇರಲಿಲ್ಲ. ಹೈ ಪವರ್ ಕಮಿಟಿ ಏಕೆ ಮಾಡಿದೆವು ಎಂದರೆ ಚೀಫ್ ಮಿನಿಸ್ಟರ್ ಅಧ್ಯಕ್ಷತೆಯಲ್ಲಿ ಕಮಿಟಿಯನ್ನು ಮಾಡಿದರೆ ನೇರವಾಗಿ ಕ್ಯಾಬಿನೆಟ್‌ನಲ್ಲಿ ಆಗತಕ್ಕಂಥ ನಿರ್ಣಯಗಳನ್ನು ಹೈ ಪವರ್ ಕಮಿಟಿಯಲ್ಲಿ ತಗೆದುಕೊಂಡರೆ ಕೆಲಸಗಳನ್ನು ಬೇಗನೆ ಮಾಡಬಹುದು. ಹೆಚ್ಚಿನ ರೀತಿಯಲ್ಲಿ ಮಾಡಬಹುದು ಎನ್ನುವ ದೃಷ್ಟಿಯಿಂದ ಮುಖ್ಯ ಮಂತ್ರಿಗಳನ್ನು ಇದರ ಛೇರ್‌ಮನ್ ಮಾಡಿ ಡೆವಲಪ್‌ಮೆಂಟ್ ಕಮಿಷನರ್ ಇದರ ಸೆಕ್ರೆಟರಿ ಮಾಡಿದೆವು. ಡೆವಲಪ್‌ಮೆಂಟ್ ಕಮಿಷನರ್ ರ್ಯಾಂಕ್‌ನವರು ಇದ್ದರೆ ಪ್ಲಾನಿಂಗ್ ಕಮಿಷನ್‌ನಿಂದ ಹಿಂದುಳಿದ ಭಾಗಕ್ಕೆ ಏನಾದರೂ ಹಣ ಸಿಗಬಹುದು ಎಂದು ತಿಳಿದುಕೊಂಡು ಡೆವಲಪ್‌ಮೆಂಟ್ ಕಮಿಷನರ್‌ರವರನ್ನು ಆ ಕಾಲದಲ್ಲಿ ಸೆಕ್ರೆಟರಿ ಮಾಡಿದೆವು. ಈ ಡಿವಿಜನಲ್ ಕಮಿಷನರ್. ಗುಲ್ಬರ್ಗದವರೇ ಸೆಕ್ರೆಟರಿ ಆಗಬೇಕೆಂದು ಅಲ್ಲ. ಡೆವಲಪ್‌ಮೆಂಟ್ ಕಮಿಷನರ್ ಅಲ್ಲ ಡಿವಿಜನಲ್ ಕಮಿಷನರ್ ರ್ಯಾಂಕ್‌ನವರು ಆಗಬೇಕೆಂದು ಮಾಡಿದ್ದೇವೆ. ತಮಗೆ ಬಹಳ ತಪ್ಪು ತಿಳುವಳಿಕೆಯಾಗಿದೆ. ಏನೆಂದರೆ ಗುಲ್ಬರ್ಗ ಡಿವಿಜನಲ್ ಕಮಿಷನರ್ ಇದರಲ್ಲಿ ಇರುತ್ತಾರೋ ಏನೋ? ಅವರು 4 ಜಿಲ್ಲೆಗಳ ಕೆಲಸ ಬಿಟ್ಟು ಬರೀ ಇದೇ ಕೆಲಸ ಮಾಡುತ್ತಾ ಕುಳಿತರೆ ಆ ಕೆಲಸಗಳು ಹೇಗೆ ಆಗಬೇಕು ಎನ್ನತಕ್ಕಂಥ ಸಂಶಯ ಬಂದಿರಬಹುದು. ಆದರೆ ಡಿವಿಜನಲ್ ಕಮಿಷನರ್ ರ್ಯಾಂಕ್ ಅಧಿಕಾರಿಗೆ ಸೆಕ್ರೆಟರಿ ಎಂದು ಮಾಡಿ ಫುಲ್ ಟೈಮ್ ಛೇರ್‌ಮನ್ ಅಪಾಯಿಂಟ್‌ಮೆಂಟ್ ಮಾಡಿ ಈ ಒಂದು ಮಸೂದೆ ಪ್ರಕಾರ ಕೆಲಸವನ್ನು ಮಾಡಬೇಕು ಎನ್ನುವ ದಷ್ಟಿಯಿಂದ ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ. ಅದಕ್ಕಾಗಿ ಬೆಂಗಳೂರಿನಲ್ಲಿ ಮೀಟಿಂಗ್ ಮಾಡಬೇಕು. ಡೆಲ್ಲಿಯಲ್ಲಿ ಮೀಟಿಂಗ್ ಮಾಡಬೇಕು, ಅವರಿಗೆ ಸವಲತ್ತುಗಳನ್ನು ಕೂಡಬೇಕು ಎನ್ನತಕ್ಕ ದೃಷ್ಟಿಯಿಂದಲ್ಲ. ಬೆಂಗಳೂರಿನಲ್ಲಿ ಕೂಡ ಮಾಡತಕ್ಕ ಪ್ರಾವಿಷನ್ ಏತಕ್ಕೆ ಮಾಡಿದ್ದೇವೆ ಎಂದರೆ ಸೆಷನ್ ಟೈಮ್‌ನಲ್ಲಿ ಒಂದು ವೇಳೆ ಚೇರ್‌ಮನ್ ಇಲ್ಲಿಯೇ ಮೀಟಿಂಗ್ ಕರೆಯಬೇಕು ಎಂದರೆ ಅದಕ್ಕೂ ಕೂಡ ಅನುಕೂಲವಾಗಬೇಕೆಂಬ ಉದ್ದೇಶದಿಂದ ಮಾಡಿದ್ದೇವೆ. ಗುಲ್ಬರ್ಗಾದಲ್ಲಿ ಹೆಡ್‌ಕ್ವಾರ್ಟರ್ಸ್ ಇರುವುದರಿಂದ ಅವರು ಅಲ್ಲಿ ಇದ್ದು ಅಲ್ಲಿ ಡೇ ಟು ಡೇ ಕಾರ್ಯವನ್ನು ಅಲ್ಲೇ ನಿರ್ವಹಿಸಬೇಕು. ನಮ್ಮ ಹರಪನಹಳ್ಳಿಯವರು ಹೇಳಿದ ಹಾಗೆ ಆ ಭಾಗದಲ್ಲಿ ಏನು ನಡೆಯುತ್ತದೆ, ಅದು ಅಲ್ಲೇ ರಿವ್ಯೂ ಆಗಬೇಕು. ಅಲ್ಲಿನ ಸೆಕ್ರೆಟರಿಗಳು ಇದನ್ನು ರಿವ್ಯೂ ಮಾಡಬೇಕು. ಪುನಃ ಇಲ್ಲಿಗೆ ಯಾರೂ ಬರಬೇಕಾಗಿಲ್ಲ. ಮಾನೀಟರ್ ಮೊದಲು ಸೆಕ್ರೆಟರಿಗಳು ಬರುತ್ತಾರೆ, ಹೋಗುತ್ತಾರೆ. ಒಂದು ಸಣ್ಣ ಆಫೀಸ್ ಇರಬಹುದೇ ಹೊರತು ಈ ಮೀಟಿಂಗ್ ಪದೇ ಪದೇ ಬೆಂಗಳೂರಿನಲ್ಲಿ ಆಗತಕ್ಕದ್ದಲ್ಲ. ಒಂದು ವೇಳೆ ಡೆಲ್ಲಿಯಲ್ಲಿ ಮಾಡಬೇಕಾದ ಪ್ರಸಂಗ ಬಂದರೆ ಅದಕ್ಕೂ ಪ್ರಾವಿಷನ್ ಇರಲಿ ಎಂದು ಇಲ್ಲಿ ಪ್ರಾವಿಷನ್

ಮಾಡಿದ್ದೇವೆ. ಇಲ್ಲದಿದ್ದರೆ ನಾಳೆ ರೂಲ್ಸ್‌ನಲ್ಲಿ ಇರಲಿಲ್ಲ ಅಂದರೆ, ಹೇಗೆ ಇಷ್ಟೊಂದು ಜನ ಡೆಲ್ಲಿಗೆ ಹೋಗಿ ಮೀಟಿಂಗ್ ಮಾಡಿದರು, ಆ ಪ್ರೊಸಿಡಿಂಗ್ಸ್‌ಗೆ ಮಹತ್ವ ಇಲ್ಲ ಎಂದು ನಾಳೆ ಯಾರೂ ಅನ್ನಬಾರದು. ಆದ್ದರಿಂದ ಇದನ್ನು ಅಳವಡಿಸಿಕೊಂಡಿದ್ದೇವೆಯೇ ಹೊರತು ಅಧಿಕಾರಿಗಳಿಗೆ ಸಹಾಯ ಮಾಡಬೇಕು ಅಥವಾ ಅವರಿಗೆ ಸವಲತ್ತುಗಳು ಸಿಗಬೇಕು ಎನ್ನುತಕ್ಕ ದೃಷ್ಟಿಯಿಂದಲ್ಲ. ನಾವು ಅನೇಕ ಸಲ ಪಾಲಿಸಿ ಮ್ಯಾಟರ್ಸ್‌ಗಳನ್ನು ಡಿಸ್ಕೆಡ್ ಮಾಡಿದಾಗ ಕೆಲವು ಬೋರ್ಡ್‌ಗಳು ಅವುಗಳ ಬಗ್ಗೆ ಗಮನ ಹರಿಸುವುದಿಲ್ಲ. ಎಷ್ಟೋ ಪಬ್ಲಿಕ್ ಅಂಡರ್‌ಟೇಕಿಂಗ್‌ಗಳು ಎಷ್ಟೋ ಕೋ ಆಪರೇಟಿವ್ ಇನ್ಸ್‌ಟಿಟ್ಯೂಷನ್‌ಗಳು ಇವೆ. ಕೆಲವರು ರೋಸ್ಟರ್ ಫಾಲೋ ಮಾಡುತ್ತಾರೆ, ಕೆಲವು ಸಂಸ್ಥೆಗಳು ಅದನ್ನು ಫಾಲೋ ಮಾಡುವುದಿಲ್ಲ. ಸ್ವಾತಂತ್ರ್ಯ ಸಿಕ್ಕು 45 ವರ್ಷಗಳಾದರೂ ಕೂಡ ಇವತ್ತಿನವರೆಗೆ ರಿಸರ್ವೇಷನ್ಸ್ ಸಿಕ್ಕುತ್ತಿಲ್ಲ. ಅನೇಕ ಸಲ ನಮ್ಮ ಪಾಲಿಸಿ ಪ್ರೊಗ್ರಾಮ್‌ಗಳನ್ನು ಅನುಷ್ಠಾನಕ್ಕೆ ತರುವುದಿಲ್ಲ. ಅದಕ್ಕೆ ಒಂದು ಡೈರಕ್ಷನ್ ಕೊಡುವ ಅವಕಾಶ ಇರಲಿ ಎಂದು ಇಲ್ಲಿ ಪ್ರಾವಿಷನ್ ಮಾಡಿದ್ದೇವೆ. ಆ ಬೋರ್ಡನ್ನು ವೀಕ್ ಮಾಡಬೇಕು, ಅದಕ್ಕೆ ಶಕ್ತಿ ಇರಬಾರದು. ಅದನ್ನು ಶಕ್ತಿ ಹೀನ ಮಾಡಬೇಕು ಎಂಬ ದೃಷ್ಟಿಯಿಂದ ಮಾಡಲಿಲ್ಲ. ನಾಳೆ ದುಡ್ಡು ಲ್ಯಾಪ್ಸ್ ಆಗಬಾರದು. ಮೋರ್ಡಿಗೆ ಶಕ್ತಿ ಇರಬೇಕು. ಹೆಚ್ಚಿನ [illegible] ಖರ್ಚು ಮಾಡಿ ಆ ಭಾಗದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು ಎನ್ನುತಕ್ಕದ್ದೂ [illegible] ಆಸೆ. ಆ ಪ್ರಕಾರ ಇವೊತ್ತು ಸ್ವಲ್ಪ ಮಟ್ಟಿಗೆ ಕೆಲಸ ನಡೆದಿದೆ. ಇವೊತ್ತು ಏನೂ ಕೆಲಸ ಆಗಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಸ್ವಲ್ಪ ರೋಡಿನ ಕೆಲಸ. ನಿಧಾನವಾಗಿರಬಹುದು. ಕೆಲವು ಕಂಟ್ರಾಕ್ಟರ್ಸ್ ತೊಂದರೆ ಕೊಟ್ಟಿದ್ದಾರೆ. [illegible]ಕ್ಕಿಂದರೆ ಮೊದಲು ಟೆಂಡರ್ ಹಾಕುತ್ತಾರೆ. ಟೆಂಡರ್ ಹಾಕಿದ ಮೇಲೆ ಏನು ಮಾಡುತ್ತಾರೆ ಎಂಬುದನ್ನು ಹೇಳುತ್ತೇನೆ. ಅವರಿಗೆ ಒಂದೆರಡು ವರ್ಷ ಟೈಮ್ ಲಿಮಿಟೇಷನ್ ಇರುತ್ತದೆ. ಟೆಂಡರ್‌ನಲ್ಲಿ ಏನೇನು ಕಂಡೀಷನ್ಸ್ ಇರುತ್ತವೆ ಆ ಕಂಡಿಷನ್ಸ್ ಪ್ರಕಾರ ಕೆಲಸ ಮಾಡಬೇಕು. ಅನೇಕ ಸಲ ಆ ಟೆಂಡರ್ ಪ್ರಕಾರ ಮಾಡದೇ ಹೋದರೆ ನಾವು ಏನು ಮಾಡಬಹುದು? ಮ್ಯಾಕ್ಸಿಮಮ್ ಫೆನಾಲ್ಟಿ ಹಾಕುತ್ತೇವೆ. 10 ರೂ. 20 ರೂ ಸಾವಿರ ರೂಪಾಯಿ ಫೆನಾಲ್ಟಿ ಹಾಕಬಹುದು; ಆದರೆ ಕ್ಯಾನ್ಸಲ್ ಮಾಡಬೇಕಾದರೆ ಕೆಲವು ತೊಂದರೆಗಳು ಇವೆ. ಕಂಟ್ರಾಕ್ಟರ್ ಟೆಂಡರ್ಸ್ ಕಂಡೀಷನ್ಸ್‌ಗಳನ್ನು ಪಯಲೇಟ್ ಮಾಡಿದಾಗ ಮಾತ್ರ ಕ್ಯಾನ್ಸಲ್ ಮಾಡಿ ನಾವು ಆ ಕೆಲಸವನ್ನು ಕೈಗೆ ತಗದುಕೊಳ್ಳಬೇಕಾಗಿದೆ. ಕೆಲವು ಕಂಟ್ರಾಕ್ಟರ್ಸ್ ಸತಾಯಿಸುತ್ತಾರೆ. ಅವರ ಬಗ್ಗೆ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಆ ಭಾಗದಲ್ಲಿ ಹೊಸದಾಗಿ ಅಪಾಯಿಂಟ್ ಆದಂಥ ಶ್ರೀ ಗೋಪಾಲ್‌ರವರು ಸುಮಾರು ಸಲ ಹೋಗಿ ಬಂದಿದ್ದಾರೆ. ಒಂದು ಸಲವೂ ಹೋಗಿಲ್ಲ ಎಂದು ಶ್ರೀ ದೇಶಪಾಂಡೆಯವರು ಹೇಳಿರುವುದು ಸರಿ ಎಂದು [illegible]ಸುಪ್ರಿಂ[illegible] ತಿಂಗಳಿಗೆ 2-3 ಸಲ ಹೋಗಿ ಬಂದಿದ್ದಾರೆ. ಕೆಲಸವನ್ನು ರಿವ್ಯೂ ಮಾಡಿದ್ದಾರೆ. ಅನೇಕ ಸಲ ಮಾನ್ಯ ಸದಸ್ಯರುಗಳು ಆ ಮೀಟಿಂಗ್‌ನಲ್ಲೇ ತರಾಟೆಗೆ ತೆಗದುಕೊಳ್ಳುತ್ತಾರೆ. ಆ ಮೀಟಿಂಗ್‌ನಲ್ಲಿ ರಿವ್ಯೂ ಮಾಡುವಾಗ, ಸಂಬಂಧಪಟ್ಟ ಮಂತ್ರಿಗಳು ರಿವ್ಯೂ ಮಾಡುವಾಗ ಅಥವಾ ಚೇರ್‌ಮನ್ ರಿವ್ಯೂ ಮಾಡುವಾಗ ಎಲ್ಲಾ ಶಾಸಕರನ್ನು ಕರೆಯಿಸಿ ಯಾವ ಯಾವ ಕ್ಷೇತ್ರದಲ್ಲಿ ಕೆಲಸ ಆಗಿಲ್ಲ, ಕಳಪೆ ಕೆಲಸ ಆಗಿದೆ ಎಂಬುದರ [illegible] ಕಂಪ್ಲೇಟ್ ಕೊಡುತ್ತಾರೆ. ಇದಕ್ಕೆ ಒಂದು ವಿಜಿಲೆನ್ಸ್ ಸೆಲ್ ಎಂದು ಒಂದು ಹೈಪವರ್ ಕಮಿಟಿ ಕಾನ್ಸ್‌ಟಿಟ್ಯೂಟ್ ಮಾಡಿದ್ದೇವೆ. ಅದರಲ್ಲಿ ಟೆಕ್ನಿಕಲ್ ಪರ್‌ಸನ್ಸ್ ಅಂದರೆ ಎಕ್ಸಿಕ್ಯೂಟಿವ್ ಇಂಜಿನೀಯರ್ಸ್, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ಸ್ ಅವರ ಒಂದು ನೇತೃತ್ವದಲ್ಲಿ ಇದನ್ನು ಮಾಡಲಾಗಿದೆ. ಕೆಲವು ಕಡೆ ಕೆಲಸ ಸಮಾಧಾನಕರವಾಗಿ ನಡೆದಿಲ್ಲ ಎಂಬುದು ಪೇಪರ್‌ನಲ್ಲೂ ಬಂದಿದೆ. ಆದರೆ ಇವೊತ್ತು ಕೆಲವು ಕೆಲಸ ಆಗಿದೆ. ಉದಾಹರಣೆಗೆ ಹೇಳುವುದಾದರೆ ಸೆಕ್ರಟರಿಯವರು ಈಗ ಅಪ್ರೂವ್ ಮಾಡುವಂಥ ಕೆಲಸ 4024, ಅದರಲ್ಲಿ ಕೈಗೆ ತೆಗೆದುಕೊಂಡಂಥ ಕೆಲಸ 3578 ಅದರಲ್ಲಿ ಕಂಪ್ಲೀಟ್ ಆದಂಥ ಕೆಲಸಗಳು 1647; ಅಂದರೆ ಇದಕ್ಕೆ ಇಲ್ಲಿಯವರೆಗೆ ಖರ್ಚಾದಂಥ ಹಣ ಸುಮಾರು 140 ಕೋಟಿ ರೂಪಾಯಿ ಮತ್ತು ಉಳಿದಂತಹ ಹಣ ಕೂಡ ಇವತ್ತು ಖರ್ಚು ಆಗುತ್ತಿದೆ, ನಾವು ಹೇಳಿದಿರಿ, ಹಣ ಬಿಡುಗಡೆ ಆಗಿಲ್ಲ ಎಂದು. ಹಣ ಈಗಾಗಲೇ ಬಿಡುಗಡೆಯಾಗಿದೆ. ನಾನು ನಿಮಗೆ ಹೇಳುತ್ತೇನೆ. 1.7.92ಕ್ಕೆ ಹತ್ತು ಕೋಟಿ ರೂಪಾಯಿ ಬಿಡುಗಡೆ ಆಯಿತು. 22.10.92ಕ್ಕೆ 15 ಕೋಟಿ

ರೂಪಾಯಿ ಬಿಡುಗಡೆ ಮಾಡಿದ್ದೇವೆ. 3.2.93ಕ್ಕೆ 15 ಕೋಟಿ. 8.2.93ಕ್ಕೆ ಹತ್ತುಕೋಟಿ. 29.3.93 ಅಂದರೆ ಮೊನ್ನೆ 15 ಕೋಟಿ ರೂಪಾಯಿ. ಹೀಗೆ ಸುಮಾರು 65 ಕೋಟಿ ರೂಪಾಯಿ ಕಮಿಟ್‌ಮೆಂಟ್ ಏನು ಇತ್ತು, ಆ ಕಮಿಟ್‌ಮೆಂಟನ್ನು ಸರ್ಕಾರ ಇವತ್ತು ಮಾಡಿ ಈ ಹಣವನ್ನು ಕೊಟ್ಟಿದೆ. ಈ ಹಣ ಲ್ಯಾಪ್ಸ್ ಆಗುವುದಿಲ್ಲ. ಏಕೆಂದರೆ ಡಿವಿಜನಲ್ ಕಮಿಷನರ್ ಅವರ ಪಿ.ಡಿ. ಅಕೌಂಟಿನಲ್ಲಿ ಇರುವುದರಿಂದ ಯಾವಾಗ ಬೇಕಾದರೂ ಬಿಲ್ಲನ್ನು ಕೊಡತಕ್ಕದ್ದು ಮಾಡುತ್ತಾರೆ. ನಾನು ಹೇಳುತ್ತೇನೆ ಬಿಲ್ ಕೊಡುತ್ತಾರೆ. ಆದರೆ ತಮಗೆ ಗೊತ್ತಿದೆ. ಇವತ್ತು ಏನು ಖರ್ಚು ಆಗಿದೆ, ಅದು ಸಫಿಷಿಯೆಂಟ್ ಇಲ್ಲ. ಇನ್ನೂ ಹೆಚ್ಚಿನ ಹಣ ಬಿಡುಗಡೆ ಮಾಡಬೇಕಾಗುತ್ತದೆ. ಏಕೆಂದರೆ ಮಾನ್ಯ ಬಸವನ ಗೌಡರು ಹಾಗೂ ಹಂಪನ ಗೌಡರು ಹೇಳಿದ ಹಾಗೆ ಅಲ್ಲಿ ಮೂರು ಸಾವಿರಕ್ಕಿಂತಲೂ ಹೆಚ್ಚಿನ ಕೆಲಸಗಳು ಏನು ಇವೆ, ಇದನ್ನು ಕಂಪ್ಲೀಟ್ ಮಾಡಬೇಕಾದರೆ ಸುಮಾರು 300 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣ ಬೇಕು. ಅದರಲ್ಲಿ ಸುಮಾರು 175 ಕೋಟಿ ರೂಪಾಯಿಗಳನ್ನು ನಾವು ಪ್ರೊವೈಡ್ ಮಾಡಿದ್ದೇವೆ. ಇನ್ನೂ 132 ಕೋಟಿ ರೂಪಾಯಿ ಪ್ರಾವಿಷನ್ ಮಾಡಬೇಕಾಗಿದೆ. ಅದಕ್ಕೆ ಈ ವರ್ಷ 66 ಕೋಟಿ 50 ಲಕ್ಷ ರೂಪಾಯಿ; ಮುಂದಿನ ವರ್ಷ 66 ಕೋಟಿ ಅಥವಾ ಇನ್ನೂ ಹೆಚ್ಚು ಹಣ ಬಿಡುಗಡೆ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೆ ಎಂಬ ನಂಬಿಕೆ ನನಗೆ ಇದೆ. ಏಕೆಂದರೆ ನೀವು ಎಲ್ಲರೂ ಪ್ಲೀಡ್ ಮಾಡಿದ್ದೀರಿ ಮತ್ತು ಈ ಭಾಗದಲ್ಲೂಕೂಡ ಎಲ್ಲರೂ ಅದರ ಬಗ್ಗೆ ಆಸಕ್ತಿ ವಹಿಸಿ ಹಿಂದುಳಿದ ಭಾಗಕ್ಕೆ ಕೊಡಬೇಕು ಎಂದು ತಾವು ಕೇಳಿದ್ದೀರಿ. ನಾವು ಸಹ ಕೇಳುತ್ತಾ ಇದ್ದೇವೆ. ಮುಂದಿನ ವರ್ಷ ಕೂಡ ಇದಕ್ಕೆ ಹೆಚ್ಚಿನ ಹಣ ಸಿಗುತ್ತದೆ. ಇವತ್ತು ಏನು ಕಮಿಟ್ ಮಾಡಿದ್ದೇವೆ, ಕಮಿಟ್ ಮಾಡಿದಂತಹ ಕೆಲಸವನ್ನು ಕಂಪ್ಲೀಟ್ ಆಗಲಿಕ್ಕೆ ಈ ಎರಡು ವರ್ಷದಲ್ಲಿ ಸಂಪೂರ್ಣವಾಗಿ ಹಣ ಸಿಗುತ್ತದೆ. ಇದು ರಾಜಕೀಯ ಅಲ್ಲ; ಆ ಭಾಗದ ಅಭಿವೃದ್ಧಿ ಮಾಡಬೇಕು ಎನ್ನತಕ್ಕದ್ದು ಎಲ್ಲರ ಆಸೆ ಇದೆ. ಆದರೆ ಸ್ವಲ್ಪ ಟೆಕ್ನಿಕಲ್ ಪ್ರಾಬ್ಲಮ್ ಮತ್ತು ಕೆಲವು ಕಡೆ ಕಂಟ್ರಾಕ್ಟರ್ಸ್ ಪ್ರಾಬ್ಲಮ್ ಇದೆ. ಇವರ ದುರುಪಯೋಗ ನಮ್ಮ ಇಂಜಿನಿಯರ್ಸ್ ತೆಗೆದುಕೊಳ್ಳುತ್ತಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅದಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಈಗಾಗಲೇ ನಮ್ಮ ಸೆಕ್ರೆಟರಿಯವರ ಹತ್ತಿರ ಮಾತನಾಡಿದ್ದೇನೆ. ಎಲ್ಲೆಲ್ಲಿ ಓವರ್ ಲ್ಯಾಪಿಂಗ್ ಇದೆ. ಪಿಡಬ್ಲ್ಯೂಡಿ, ಹಟ್‌ಕೆಡಿಬಿ ಒಂದೇ ರೋಡ್ ಮೇಲೆ ಹೋಗುತ್ತದೆ. ಮೇಂಟೆನೆನ್ಸ್ ಅವರದ್ದು; ಹೊಸ ಕೆಲಸ ಇವರದ್ದು. ಆಮೇಲೆ ನಾಳೆ ಆ ಟೆಂಡರ್ ಪ್ರಕಾರ ಕೆಲಸ ಆಗಲಿಲ್ಲ ಎಂದರೆ ಹಟ್‌ಕೆಡಿಬಿಕೆ ಏನಾದರೂ ಚೆಕ್ ವಿತ್ ಹೆಲ್ಡ್ ಮಾಡಿ ಕಳಪೆ ಕೆಲಸ ಆದರೆ ಕಿತ್ತುಹಾಕಿ ಇದನ್ನು ಮಾಡುವುದಕ್ಕೆ ಅಧಿಕಾರ ಇಲ್ಲ. ಬರೇ ಸೂಪರ್‌ವಿಷನ್ ಮಾಡಿ ರಿಪೋರ್ಟ್ ಮಾಡಬಹುದಷ್ಟೆ. ಅದಕ್ಕೆ ನಾನು ಪಿಡಬ್ಲ್ಯೂಡಿನವರಿಗೆ ಹೇಳಿದ್ದೇನೆ. ಇದನ್ನು ಸರಿಪಡಿಸಿ; ಯಾವುದಾದರೂ ಒಂದು ಏಜೆಂಟಿಗೆ ಕೊಟ್ಟು ಅವರಿಗೇ ರೆಸ್ಪಾನ್ಸಿಬಲ್ ಮಾಡಬೇಕು ಎಂದು ಹೇಳಿದ್ದೇನೆ. ಆ ಮಾತನ್ನು ನಮ್ಮ ಸೆಕ್ರಟರಿಯವರು ಒಪ್ಪಿಕೊಂಡಿದ್ದಾರೆ. ಪಿಡಬ್ಲ್ಯೂಡಿ ಮಿನಿಸ್ಟರ್ ಈ ಬಗ್ಗೆ ಚಿಂತನೆ ಮಾಡುತ್ತಾರೆ. ಅವರೂ ಕೂಡ ಇದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ಇನ್ನೂ ಒಂದು ವಿಶೇಷವಾಗಿ ತಮಗೆ ಹೇಳುವುದು ಏನು ಎಂದರೆ ತಾವು ಹೇಳಿದ್ದೀರಿ. ಹಿಂದುಳಿದ ಭಾಗದಲ್ಲಿ ವಿಶೇಷವಾಗಿ ಬೀದರ್ ಗುಲ್ಬರ್ಗದಲ್ಲಿ ಕನ್ನಡ ಶಾಲೆಗಳಿಗೆ ಹೆಚ್ಚಿನ ಅವಕಾಶ ಕೊಟ್ಟು ಸಹಾಯ ಮಾಡಬೇಕು. ಕನ್‌ಸ್ಟ್ರಕ್ಷನ್‌ನಲ್ಲಿ ಸಹಾಯ ಮಾಡಬೇಕು ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಇದನ್ನು ನಾನು ಒಪ್ಪುತ್ತೇನೆ. ಆ ಭಾಗದಲ್ಲಿ ಗುಲ್ಬರ್ಗಾದಲ್ಲಿ ಹೆಚ್ಚು ಕಡಿಮೆ 99.99ರಷ್ಟು ಕನ್ನಡ ಸ್ಕೂಲ್ ಇದೆ. ಆಲಂಡ್ ಬಾರ್ಡರ್ ಬಿಟ್ಟರೆ ನೀರೆ ಎಲ್ಲಾ ಕಡೆ ಕನ್ನಡ ಸ್ಕೂಲು ಇದೆ. ಮತ್ತು ಬೀದರ್‌ನಲ್ಲಿ ಕೂಡ ಸಂಪೂರ್ಣವಾಗಿ ಜಿರಾದ್ ಭಾಗ ಬಿಟ್ಟರೆ ಮತ್ತು ಕೆಲವು ಹುಮ್ನಾಬಾದ್, ಬಸವಕಲ್ಯಾಣ ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ಕನ್ನಡ ಸ್ಕೂಲ್ ಇವತ್ತಿನ ದಿವಸ ತೆಗೆದುಕೊಳ್ಳುತ್ತೇವೆ. ಏಕೆಂದರೆ ಅವರಿಗೆ ಕೂಡ ನೌಕರಿ ಬೇಕು ಮತ್ತು ಇವತ್ತಿನ ವ್ಯವಹಾರಕ್ಕೆ ಇವತ್ತಲ್ಲ ನಾಳೆ ಅವರು ನಾವು ಇಲ್ಲಿ ಇರಬೇಕಾಗುತ್ತದೆ ಎಂಬ ತೀರ್ಮಾನಕ್ಕೆ ಕೂಡ ಬಂದಿದ್ದಾರೆ. ಇದು ಕರ್ನಾಟಕದಲ್ಲಿಯೇ ಉಳಿಯುತ್ತದೆ. ಎಂದು ತಿಳಿದುಕೊಂಡು ಅವರು ಖಾಯಂ ಆಗಿ ಇಲ್ಲಿಯೇ ಉಳಿಯುತ್ತಾರೆ ಎಂದು ಹೇಳಿದ ಮೇಲೆ ಸಿಂಧ್ಯಾರವರು ಬಂದು ಇವತ್ತು ಬೀಗಸ್ಥಾನ ಮಾಡಿಕೊಂಡು ಬಂದಿದ್ದಾರೆ. ಇವತ್ತು

ನಿಮಗೆ ಹಮ್ಮೆಯಿಂದ ಹೇಳುತ್ತೇನೆ. ಬೀದರ್ ಜಿಲ್ಲೆಯಲ್ಲಿ ನೀವು ಲೈಟ್ ಇಲ್ಲ, ಎಂದು ಹೇಳಿದಿರಿ, ಬೀದರ್ ಜಿಲ್ಲೆಯ ಯಾವುದೇ ಒಂದು ಹಳ್ಳಿಯಲ್ಲಿ ಕೂಡ ಲೈಟ್ ಇಲ್ಲದೇ ಇಲ್ಲ. ಸಂಪೂರ್ಣವಾಗಿ 100 ಪರ್ಸೆಂಟ್ ಎಲೆಕ್ಟ್ರಿಫಿಕೇಷನ್ ಬೀದರ್‌ನಲ್ಲಿ. ಅಂದರೆ ಇನ್ನೂ ಕೆಲವು ಕೆಲಸ ಆಗುತ್ತಾ ಇದೆ, ಹಂತ ಹಂತವಾಗಿ. ಆದರೆ ಇನ್ನೂ ಕೆಲಸ ಆಗಬೇಕು. ಸ್ಕೂಲ್ ಬಿಲ್ಡಿಂಗ್ ವಿಷಯ ತಾವು ಕೇಳಿದ್ದೀರಿ. ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. 28 ಕೋಟಿ 92 ಲಕ್ಷ ರೂಪಾಯಿ ಸ್ಕೂಲ್ ಬಿಲ್ಡಿಂಗ್ ಕನ್ಸ್ಟ್ರಕ್ಷನ್‌ಗೆ ಕೊಟ್ಟಿದ್ದೇನೆ. ನಾಲ್ಕು ಜಿಲ್ಲೆಗೆ, ಗುಲ್‌ಬರ್ಗಾ, ರಾಯಚೂರು, ಬೀದರ್‌ಗೆ. ಈಗ ರೋಡ್ ಮತ್ತು ಬ್ರಿಡ್ಜಸ್ ; ಇದನ್ನು ಹೋಲಿಸಿದರೆ, 32 ಕೋಟಿ 56 ಲಕ್ಷ ; ಮೇಜರ್ ಮತ್ತು ಮೈನರ್ ಇರಿಗೇಷನ್‌ಗೆ ಹಚ್ಚಿನ ಹಣ ಏಕೆ ಕೊಟ್ಟಿಲ್ಲ. ಎಂದರೆ ನಾವು ಹೆಚ್ಚಿನ ಹಣ ಇದರಲ್ಲಿ ಎಲ್ಲಾ ಕೊಟ್ಟುಕೊಳ್ಳುತ್ತಾ ಹೋದರೆ ರೆಗ್ಯುಲರ್ ಬಜೆಟ್‌ನಲ್ಲಿ ಕೂಡ ನೀವು ನ್ಯಾಯ ಒದಗಿಸಿಕೊಡಬೇಕಾಗುತ್ತದೆ; ಅನೇಕ ಸಂದರ್ಭದಲ್ಲಿ. ಇವತ್ತು ಏನು ಆಗಿದೆ. ಕೆಲವು ಅಧಿಕಾರಿಗಳಿಗೆ ಇದೊಂದು ಮಜಾ ಆಗಿಬಿಟ್ಟಿದೆ.

ಏನೆಂದರೆ, ಯಾವುದೇ ಕೇಳಿರಿ. ಹೈದರಾಬಾದ್-ಕರ್ನಾಟಕ ಫಂಡ್ ಇದೆಯಲ್ಲಾ, ಅದರಲ್ಲಿ ಮಾಡಿ ಎನ್ನುತ್ತಾರೆ, ಹಾಸ್ಪೆಟಲಿಗೆ ಕೇಳಿ, ಇದರ ಹೆಸರು ಹೇಳುತ್ತಾರೆ, ಇರಿಗೇಷನ್‌ಗೆ ಕೇಳಿ ಇದರ ಹೆಸರು ಹೇಳುತ್ತಾರೆ, ಮತ್ತು ತೋಟಗಾರಿಕೆಗೆ ಕೇಳಿದರೂ ಇದೇ ಹೇಳುವುದು. ಅಗ್ರಿಕಲ್ಚರ್ ಸೀಡ್ ಫಿಲ್ಡ್ ಎಂದು ಯಾವುದೋ ಒಂದು ಮಾಡುತ್ತಾರಲ್ಲಾ ಅದನ್ನು ಮಾಡಿ ಎಂದರೂ ಅದರಲ್ಲೇ ಎಂದು ಹೇಳುತ್ತಾರೆ. ಹೀಗಾಗಿ ರೆಗ್ಯುಲರ್ ಫಂಡ್ ಬಹಳ ಕಡೆ ಕಡಿಮೆಯಾಗುತ್ತದೆ. ಅದಕ್ಕೋಸ್ಕರ, ಈಗಾಗಲೇ ನಮ್ಮೆಲ್ಲಾ ಸದಸ್ಯರು 'ಒಂದು ಕೈಯಿಂದ ಕೊಟ್ಟು, ಇನ್ನೊಂದು ಕೈಯಿಂದ ಕಸಿದುಕೊಳ್ಳುತ್ತಿದ್ದೀರಿ' ಎಂದು ಅಜಿಟೇಟ್ ಮಾಡುತ್ತಿದ್ದಾರೆ. 'ನೀವು ರೋಡ್ಸ್, ಬ್ರಿಡ್ಜಗೋಸ್ಕರ ತೆಗೆದುಕೊಂಡರ ನಮ್ಮ ರೆಗ್ಯುಲರ್ ಬಜೆಟ್‌ನಲ್ಲಿ ಕಡಿಮೆಯಾಗುತ್ತದೆ. ಇಲ್ಲಿ ಕೊಟ್ಟಿದ್ದೇ ಒಂದು ತೋರಿಸುವುದೇ ಇನ್ನೊಂದು' ಎನ್ನುವ ಅರ್ಥ ಬರುವ ರೀತಿಯಲ್ಲಿ ಅವರು ಹೇಳುತ್ತಿದ್ದಾರೆ. ಅದಕ್ಕಾಗಿ, ಈ ಹಣ ಅಡಿಷನಲ್ ಆಗಿ ಇರಬೇಕೆಂಬ ದೃಷ್ಟಿಯಿಂದ ನಾವು ಈ ಲಿಫ್ಟ್ ಇರಿಗೇಷನ್ ಕೆಲಸ ಮಾಡಿ ಎಂದು ಹೇಳಿದ್ದೇವಲ್ಲಾ, ಅದಕ್ಕಾಗಿ ರೆಗ್ಯುಲರ್ ಫಂಡ್‌ನಲ್ಲಿ ತೆಗೆದುಕೊಂಡು, ಉಳಿದಂಥ ಕೆಲಸಕ್ಕೆ ಹೆಚ್ಚಿನ ಹಣ ಕೊಡಬೇಕೆಂಬ ದೃಷ್ಟಿಯಿಂದ ಇದರಲ್ಲಿ 5 ಕೋಟಿ 32 ಲಕ್ಷ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದೇವೆ. ಮೈನರ್ ಇರಿಗೇಷನ್‌ಗೆ 7 ಕೋಟಿ 56 ಲಕ್ಷ ರೂಪಾಯಿ, ಎಜುಕೇಷನ್‌ಗೆ 28 ಕೋಟಿ 92 ಲಕ್ಷ ರೂಪಾಯಿಗಳು. ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ಗೆ 43 ಕೋಟಿ ರೂಪಾಯಿಗಳು. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ 23 ಕೋಟಿ 66 ಲಕ್ಷ ರೂಪಾಯಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ 9 ಕೋಟಿ 19 ಲಕ್ಷ ರೂಪಾಯಿಗಳು, ಕೋ-ಆಪರೇಷನ್‌ಗೆ ಅಷ್ಟೇನೂ ಹೆಚ್ಚಿನ ಹಣವಿಲ್ಲ. ಎಕ್ಸೆಪ್ಟ್ 9 ಕೋಟಿ ರೂಪಾಯಿಗಳೆಂದರೆ ಅದು ನಾರಂಜಾ ಸಕ್ಕರೆ ಕಾರ್ಖಾನೆಗೆ ಕೊಟ್ಟಿಂಥ ಹಣ ಕೆಇಬಿಗೆ 12 ಕೋಟಿ 44 ಲಕ್ಷ ರೂಪಾಯಿಗಳು, ಯುವಜನ ಸೇವೆಗೆ 4 ಕೋಟಿ ರೂಪಾಯಿಗಳು, ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ಸಮಾಜ ಕಲ್ಯಾಣಕ್ಕೆ, ಸುಮಾರು 5 ಕೋಟಿ ರೂಪಾಯಿಗಳು, ಉಳಿದಂಥ 95 ಲಕ್ಷ ರೂಪಾಯಿಗಳು ಇಲ್ಲಿಯವರೆಗೆ ಎಸ್ಟಾಪ್ಲಿಷ್‌ಮೆಂಟ್‌ಗೆ ಖರ್ಚಾಗಿದೆ. ಇಲ್ಲಿಯವರೆಗೆ ನಾವು ಹಾಕಿಕೊಂಡಂಥ ಲೆಕ್ಕದ ಪ್ರಕಾರ ಅಲಾಟ್‌ಮೆಂಟ್ ಏನಿದೆಯೆಂದರೆ, ಹೆಚ್ಚಿನ ಮೊತ್ತವನ್ನು ನಾವು ಎಜುಕೇಷನ್‌ಗೆ ಕೊಟ್ಟಿದ್ದೇವೆ, ಗ್ರಾಮಾಣಾಭಿವೃದ್ಧಿಗೆ ಮತ್ತು ನಗರ ಪ್ರದೇಶಗಳಲ್ಲಿರತಕ್ಕಂಥವರಿಗೆ ಕುಡಿಯುವ ನೀರಿಗಾಗಿ ಒದಗಿಸಿದ್ದೇವೆ. ಆದಷ್ಟು ಪ್ರಾಮಾಣಿಕ ರೀತಿಯಿಂದ ಸರ್ಕಾರ ಪ್ರಯತ್ನ ಮಾಡುತ್ತಿದೆ. ಎಲ್ಲವೂ ಕೂಡ ಸಮಾಧಾನಕರವಾಗಿದೆಯೆಂದು ನಾನು ಹೇಳುತ್ತಿಲ್ಲ. ಆದರೆ, ಸ್ವಲ್ಪ ಮಟ್ಟಿಗೆ ಪ್ರಗತಿಯಾಗುತ್ತಿದೆ. ಸ್ವಲ್ಪ ಕೋ-ಆರ್ಡಿನೇಷನ್ ಕೊರತೆಯಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏನೆಂದರೆ, ವಿವಿಧ ಪಜೆನ್ಸಿಗಳಾದ ಕಾರಣ ಅನೇಕ ಸಲ ಜಿಲ್ಲಾ-ಪರಿಷತ್ತಿನಲ್ಲಿ ಹೇಗೆ ಗೊಂದಲವಿರುತ್ತದೆಯೋ ಆ ರೀತಿ ಕೆಲವು ಕಡೆಯಾಗಿದೆ. ಆದರೆ, ಈಗ ಪರ್ಮನೆಂಟ್ ಬೋರ್ಡ್ ಆಗಿ ಅದಕ್ಕೊಬ್ಬ ಪರ್ಮನೆಂಟ್ ಛೇರ್ಮನ್ ಸೆಕ್ರೆಟರಿ ಆದ ನಂತರ ಮೂರು ತಿಂಗಳಿಗೊಮ್ಮೆ ಪದೇ ಪದೇ ರಿವ್ಯೂ ಮಾಡಿದ ನಂತರ ಸಮಸ್ಯೆ ಬಗೆ ಹರಿಯುತ್ತಿದೆ. ಆದ್ದರಿಂದ, ಆ

ಕುರಿತು ತಾವು ಯಾವುದೇ ಸಂಶಯಪಟ್ಟುಕೊಳ್ಳಬಾರದು, ಮತ್ತು ಇದರಲ್ಲಿ ದುರುಪಯೋಗವಾಗಿದೆಯೆಂದು ನನಗೆ ಕಂಡು ಬಂದರೆ ಎನ್‌ಕ್ವೈಯರಿ ಮಾಡಿಸುತ್ತೇನೆ. ಹೆಚ್ಚಾಗಿ ದುರುಪಯೋಗವಾಗುವುದೇ ಪಿಡಬ್ಲ್ಯೂಡಿ ಮತ್ತು ಇರಿಗೇಷನ್‌ನಲ್ಲಿ. ಒಂದು ವೇಳೆ ದುರುಪಯೋಗವೇನಾದರೂ ಆಗಿದ್ದರೆ ಸಂಬಂಧಪಟ್ಟ ಸೆಕ್ರೆಟರಿ ಇದ್ದಾರೆ. ಅವರು ಅದನ್ನು ರಿವ್ಯೂ ಮಾಡುತ್ತಾರೆ. ಈಗಾಗಲೇ ಕೆಲವು ಕಡೆ ಆದೇಶ ಕೊಟ್ಟಿದ್ದೇವೆ. ನಾನು ಕೆಲವು ಕಡೆ ಹೋದಾಗ ಈ ರೀತಿಯಾಗಿರುವುದು ನನ್ನ ಗಮನಕ್ಕೆ ಬಂದಾಗ ನಾನು ನೇರವಾಗಿ ಸೆಕ್ರೆಟರಿಯವರಿಗೆ ಬರೆದು ಲೋಕಾಯುಕ್ತಕ್ಕೆ ರೆಫರ್ ಮಾಡಿಸಿ ಎಂದು ಹೇಳಿದ್ದೇನೆ. ಈಗ ಹಂತಹಂತವಾಗಿ ಈ ಕೆಲಸ ನಡೆದಿದೆ. ಆದುದರಿಂದ, ತಾವು ಈ ವಿಧೇಯಕಕ್ಕೆ ಒಪ್ಪಿಗೆ ಕೊಟ್ಟು, ಈಗ ತಾವುಗಳೆಲ್ಲರೂ ಕನ್‌ವಿನ್ಸ್ ಆಗಿರಬಹುದೆಂದು ತಿಳಿದಿದ್ದೇನೆ. ಮೊದಲು ಇದಕ್ಕೆ ಅಪ್ಪೋಸ್ ಮಾಡಿದ್ದೇವೆಂದು ಹೇಳಿದ್ದೀರಿ. ಈಗ ಇದಕ್ಕೆ ನಿಮ್ಮ ಸಂಪೂರ್ಣ ಬೆಂಬಲವಿದೆಯೆಂದು ತಿಳಿದಿದ್ದೇನೆ. ಮುಂದೆಯೂ ಕೂಡ ಹೆಚ್ಚಿನ ಹಣ ಒದಗಿಸುವುದಕ್ಕೆ ತಾವು ಸಹಕಾರ ಕೊಡುತ್ತೀರೆಂದು ತಿಳಿದು ನಾನು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:- ಆ ಭಾಗದ ಅಭಿವೃದ್ಧಿ ಸಲುವಾಗಿ ಹೆಚ್ಚು ಹಣ ಕೊಡುತ್ತೇವೆಂದು ಹೇಳಿದರೆ ಮಾತ್ರ ನಾವು ಈ ಬಿಲ್ಲನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮುಖ್ಯ ಮಂತ್ರಿಗಳು ಹಣ ಕೊಡುವುದಿಲ್ಲವೆನ್ನತಕ್ಕಂಥ ಅಪನಂಬಿಕೆ ನಿಮಗೆ ಇದೆಯೇ? ನನಗಂತೂ ಆ ಅಪನಂಬಿಕೆ ಇಲ್ಲ. ನನಗೆ ಅವರು ಹಣ ಒದಗಿಸುತ್ತಾರೆಂಬ ನಂಬಿಕೆ ಇದೆ. ಆದುದರಿಂದ, ಅವರಿಬ್ಬರನ್ನೂ ಬೇರ್ಪಡಿಸಬೇಡಿ ಎಂದು ನಾನು ಹೇಳುತ್ತಿದ್ದೇ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1993ರ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 10 ರವರೆಗೆ

ಉಪಾಧ್ಯಕ್ಷರು:' ಖಂಡ 2 ರಿಂದ 10 ರವರೆಗೆ, ಎರಡೂ ಸೇರಿದಂತೆ' ಈ ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 10 ರವರೆಗೂ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ''ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವನೆ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರಿ ಸಚಿವರು):- "1993ರ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ " 1993ರ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಮಂಡಳಿ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1993ರ ಕರ್ನಾಟಕ ತೆರಿಗೆ ಕಾನೂನುಗಳ(ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೇ, 1993 ರ ಕರ್ನಾಟಕ ತೆರಿಗೆ ಕಾನೂನುಗಳು(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ '1993ರ ಕರ್ನಾಟಕ ತೆರಿಗೆ ಕಾನೂನುಗಳ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 1993ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು:- ವಿಧೇಯಕವನ್ನು ಮಂಡಿಲಾಗಿದೆ.

1993ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ(ಮುಖ್ಯ ಮಂತ್ರಿಗಳು):- ಮಾನ್ಯಅಧ್ಯಕ್ಷರೇ, 1993ರ ಕರ್ನಾಟಕ ತೆರಿಗೆ ಕಾನೂನುಗಳ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ:- ಇದರಲ್ಲಿ ಹೇಳುವುದು ಏನೂ ಇಲ್ಲ. ಬಡ್ಜೆಟ್‌ನಲ್ಲಿ ಎಲ್ಲಾ ಇದೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ "1993ರ ಕರ್ನಾಟಕ ತೆರಿಗೆ ಕಾನೂನುಗಳು(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅನುಬಂಧ

ಖಂಡ 2 ರಿಂದ 5 ರವರೆಗೆ:-